| ಸಂಪಾದಕ ಸಮಿತಿ | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಕಾರ್ಯದರ್ಶಿ |
| ಸುಬ್ರಹ್ಮಣ್ಯಂ. ಬಿ. | ಸದಸ್ಯರು |
| ಶ್ರೀಮತಿ ಲಲಿತ ರಮೇಶ | ಸದಸ್ಯರು |
| ಕೆ.ಸಿ. ನಟರಾಜನ್ | ಸಂಪಾದಕ |


# ಬೃಹಚ್ಚರಣ

| ಸಂಘದ ಸದಸ್ಯರಾಗಿ | |
|---|---|
| ಮಹಾ ಪೋಷಕರು | – 25,000/- |
| ಪೋಷಕರು | – 5,000/- |
| ಸದಸ್ಯತ್ವ | – 1,000/- |
| ವಾರ್ಷಿಕ ನಿರ್ವಹಣೆ | – 250/- |

ಸಂಪುಟ : 5 ಸಂಚಿಕೆ : 4 ತ್ರೈಮಾಸಿಕ ವಾರ್ತಾ ಪತ್ರ ಖಾಸಗಿ ಪ್ರಸಾರಕ್ಕಾಗಿ ಅಕ್ಟೋಬರ್–ಡಿಸೆಂಬರ್ 2015

## ಅರ್ಪಣೆ



ಈ ಸಂಚಿಕೆಯನ್ನು
ನಮ್ಮ ಸಮುದಾಯದ
ಹಿತೈಷಿಗಳು ಹಾಗೂ ಸಂಘದ
ಹಿಂದಿನ ಪದಾಧಿಕಾರಿಗಳಾದ
**ಕಾಚರಕನಹಳ್ಳಿ ಗೋಪಾಲಯ್ಯ**
ಅವರಿಗೆ ಶ್ರದ್ಧೆ ಹಾಗೂ
ಗೌರವಗಳಿಂದ ಅರ್ಪಿಸಲಾಗಿದೆ

## ಸಂಪಾದಕೀಯ

*ಆತ್ಮೀಯರೇ ನಮಸ್ಕಾರ*

ತಾವು ಕಳುಹಿಸುವ ಲೇಖನಗಳು ಬಿಳಿ ಹಾಳೆಯ ಒಂದೇ ಬದಿಯಲ್ಲಿ ಇರಬೇಕು ಹಾಗೂ ಚಿತ್ರಗಳು ಖಚಿತ ವಿವರಗಳೊಂದಿಗೆ ಕಳುಹಿಸಲು ಕೋರಿಕೆ. 'ಬೃಹಚ್ಚರಣ' ಸಂಚಿಕೆ ಸಕಾಲದಲ್ಲಿ ತಲುಪಲು ಸರಿಯಾದ ಅಂಚೆ ವಿಳಾಸವನ್ನು ತಿಳಿಸಿ.

ಹೊಸ ವರ್ಷ 2016 ಮಕರ ಸಂಕ್ರಾಂತಿ, ಗಣ ರಾಜ್ಯೋತ್ಸವಕ್ಕೆ ಸಂಘದ ಸಂಪಾದಕ ಸಮಿತಿಯ ಪರವಾಗಿ ಶುಭ ಕೋರುತ್ತೇನೆ. ದಾನಿಗಳು, ಜಾಹೀರಾತು ಪ್ರಾಯೋಜಕರಿಗೆ ಸ್ವಾಗತ.

ನಿಮ್ಮವ

■ **ಕೆ.ಸಿ.ನಟರಾಜನ್**


ಸಂಪಾದಕ, 9845113475





ಸಂಘದ ಖಜಾಂಚಿ ಶ್ರೀ ಸತ್ಯನಾರಾಯಣ ಮತ್ತು ಕುಟುಂಬದವರು ಸಂಘಕ್ಕೆ ರೂ. 1,00,000/– ಗಳನ್ನು ಸಂಘದ ಶಾಶ್ವತ ಅನ್ನ ಸಂತರ್ಪಣಾ ನಿಧಿಗೆ ಅವರ ಸೋದರ ದಿವಂಗತ ಗೋಪಾಲಕೃಷ್ಣ ಅವರ ನೆನಪಿಗಾಗಿ ದೇಣಿಗೆ ನೀಡಿದ ಸಂದರ್ಭ.

## ಶ್ರೀ ಶ್ರೀನಿವಾಸ ಕಲ್ಯಾಣೋತ್ಸವದ ವಿಶೇಷಾಂಕ



## ಅಧ್ಯಕ್ಷರ ನುಡಿ

ಬೃಹಚ್ಚರಣ ಬಂಧುಗಳಿಗೆ ನಮಸ್ಕಾರ

ತಮಗೂ ತಮ್ಮ ಕುಟುಂಬದ ಸದಸ್ಯರೆಲ್ಲರಿಗೂ ಹೊಸ ವರ್ಷ 2016 ಹಾಗೂ ಸಂಕ್ರಾಂತಿ ಹಬ್ಬ ಶುಭ ತರಲೆಂದು ಹಾರೈಸುತ್ತೇನೆ.

ನಾಗೇಶ್ವರ ಕಿತ್ತಿಗಾನಹಳ್ಳಿಯಲ್ಲಿ ದಿನಾಂಕ 6–12–2015ರಂದು ತಮ್ಮೆಲ್ಲರ ಆಶಯದಂತೆ, ಸತತವಾಗಿ ಮೂರನೇ ವರ್ಷವೂ ಶ್ರೀ ಶ್ರೀನಿವಾಸದೇವರ ಕಲ್ಯಾಣೋತ್ಸವವನ್ನು ತಮ್ಮ ಸಹಕಾರದಿಂದ ವಿಜೃಂಭಣೆಯಿಂದ ನೆರವೇರಿಸಲಾಯಿತು. ದಾನಿಗಳಿಗೆ, ಪ್ರಾಯೋಜಕರು, ಸಂಘಟಕರು, ಕಾರ್ಯಕರ್ತರು ಹಾಗೂ ಪಾಲ್ಗೊಂಡ ಸರ್ವರಿಗೂ ಅಭಿನಂದನೆ.

ಸಂಘದ ಖಜಾಂಚಿ ಕಿತ್ತಿಗಾನಹಳ್ಳಿಯ ಶ್ರೀ ಸತ್ಯನಾರಾಯಣ ಕುಟುಂಬದವರು ಸಂಘದ ಅಭಿವೃದ್ಧಿಗಾಗಿ ಒಂದು ಲಕ್ಷ ರೂಪಾಯಿ ನೀಡಿರುವುದಕ್ಕೆ ಕಾರ್ಯಕಾರಿ ಸಮಿತಿ ಆಭಾರಿ.

ಹಿಂದಿನ ವರ್ಷಗಳಂತೆಯೇ ಈ ಬಾರಿ ಕೂಡ ಭಾನುವಾರ 13–03–2016ರಂದು ನಾಗಕ್ಷೇತ್ರದಲ್ಲಿ 'ನಾಗಾರಾಧನೆ'ಯ ಕಾರ್ಯಕ್ರಮ ವನ್ನು ಅಚ್ಚುಕಟ್ಟಾಗಿ ತಮ್ಮೆಲ್ಲರ ಸಹಕಾರದಿಂದ ಸಂಘ ಏರ್ಪಡಿಸಲಿದೆ.

ಮುಂದಿನ ದಿನಗಳಲ್ಲಿ ಹಿರಿಯ ಸದಸ್ಯರ ಮಾರ್ಗದರ್ಶನದಲ್ಲಿ ನಮ್ಮ ಯುವಕರ ತಂಡ ಸಂಘಟನೆಯನ್ನು ಸಂಸ್ಕೃತಿ, ಸಂಪ್ರದಾಯದಿಂದ ಮುಂದುವರಿಸಲೆಂದು ಆಶಿಸುತ್ತೇನೆ.

ಶುಭವಾಗಲಿ.....

**ತಮ್ಮವ,**

■ **ಎಸ್. ಸೋಮಸುಂದರ**



## ಮೈ.ಮಂ.ದ್ರಾ.ಬೃ. ಸಂಘದ ಕಾರ್ಯಕಾರಿ ಸಮಿತಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ**

### ಕಾರ್ಯಕಾರಿ ಸಮಿತಿ : 2015–2018

| | | |
|---|---|---|
| ಅಧ್ಯಕ್ಷರು | : | **ಎಸ್. ಸೋಮಸುಂದರ, 99001 13298** |
| ಉಪಾಧ್ಯಕ್ಷರು | : | **ಎಚ್.ಕೆ. ಶಶಿಧರ್, 98451 73766** |
| ಕಾರ್ಯದರ್ಶಿ | : | **ವಿ.ಎಸ್. ಮಣಿ, 98450 55582** |
| ಸಹಕಾರ್ಯದರ್ಶಿ | : | **ಅರುಣ್ ವಿ., 98801 66001** |
| ಖಜಾಂಚಿ | : | **ಎಸ್. ಸತ್ಯನಾರಾಯಣ, 99809 45699** |
| ಲೆಕ್ಕಪರಿಶೋಧಕರು | : | **ಎಸ್.ಸಿ. ಶ್ರೀನಿವಾಸ, 98453 76949** |
| ಗೌರವ ಸದಸ್ಯರು | : | **ಮಂಜುನಾರಾಯಣ್ ಕೆ. 98861 14279** |
| | | **ಟಿ.ಎಸ್. ಮಣಿ, 98451 76335** |
| | | **ಟಿ.ಎಸ್. ರಮೇಶ್, 96638 74531** |
| | | **ಟಿ.ಪಿ. ಸೂರ್ಯ ನಾರಾಯಣ, 99454 84268** |
| | | **ಸರಸ್ವತಿ ನಟರಾಜನ್, 94806 19730** |
| | | **ಕೆ. ಜಿ. ವೆಂಕಟೇಶ್, 99640 12687** |
| | | **ಆರ್. ಗಣೇಶ ಶ್ರೀಧರ್, 9880187686** |
| | | **ಟಿ. ನಾಗೇಶ್, 99806 62118** |
| | | **ಎ.ವಿ. ಮಂಜುನಾಥ, 98441 08202** |
| | | **ಸುಬ್ರಹ್ಮಣ್ಯಂ ಬೆಂಗಳೂರು, 94498 69667** |
| | | **ಕೆ.ಬಿ.ಎಸ್. ಶರ್ಮಾ, 94820 87344** |
| | | **ಅನಂತ ಕೆ.ಎಸ್. 97404 44222** |
| | | **ಶಂಕರ ಪ್ರಸಾದ್ ಬಿ.ಆರ್. 98456 63833** |

## ಅರ್ಪಣೆ – ಶ್ರೀ ಗೋಪಾಲಯ್ಯ


ಕಾಚರಕನಹಳ್ಳಿ ಕೃಷ್ಣಪ್ಪನವರ ತೃತೀಯ ಪುತ್ರ ಶ್ರೀಯುತ ಗೋಪಾಲಯ್ಯನವರು 1919ರಲ್ಲಿ ಜನಿಸಿದರು. ನಮ್ಮ ಸಂಘದ ಹಿಂದಿನ ಪೋಷಕರಲ್ಲಿ ಒಬ್ಬರಾಗಿ ಸೇವೆ ಸಲ್ಲಿಸಿದವರು.

ಕೌಂಡಿಣ್ಯ ಗೋತ್ರದ ಶ್ರೀ ಗೋಪಾಲಯ್ಯ ಮತ್ತು ಕುಟುಂಬದವರು ಕಿತ್ತಿಗಾನಹಳ್ಳಿಯ ನಾಗೇಶ್ವರ ಕ್ಷೇತ್ರದಲ್ಲಿ ನಡೆಯುವ 'ನಾಗಾರಾಧನಾ' ದೇವತಾಕಾರ್ಯಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದುದು ಬೃಹಚ್ಚರಣ ಸಮುದಾಯಕ್ಕೆಲ್ಲಾ ತಿಳಿದ ವಿಷಯ. ಕ್ಷೇತ್ರದ ಶ್ರೀ ಶ್ರೀನಿವಾಸ ದೇವರ ಉತ್ಸವಕ್ಕಾಗಿ ಕಂಚಿನ ಗರುಡವಾಹನವನ್ನು ಅರ್ಪಿಸಿರುತ್ತಾರೆ. ನಾಗಾರಾಧನೆಯ ರಾತ್ರಿ ನಡೆಯುವ 'ಕಲ್ಯಾಣೋತ್ಸವ'ವನ್ನು ಇವರು ಮತ್ತು ಇವರ ಸಹೋದರರ ಕುಟುಂಬದ ಸದಸ್ಯರಿಂದ ಪ್ರತಿ ವರ್ಷ ನಡೆಸಲಾಗುತ್ತಿದೆ.

ಸ್ವಾವಲಂಬಿ ಗೋಪಾಲಯ್ಯನವರು ಬೆಂಗಳೂರು ದಂಡು ಪ್ರದೇಶದಲ್ಲಿ ವಾಸವಾಗಿದ್ದು, ಸ್ವಂತವಾಗಿ ಬೇಕರಿ ಉದ್ಯಮವನ್ನು ಕಸುಬಾಗಿ ನಡೆಸಿದಲ್ಲದೆ, ಡೈರಿ ಉದ್ಯಮದಲ್ಲೂ ನಮ್ಮ ಸಮುದಾಯ ದಲ್ಲಿ ಮೊದಲಿಗರಾದರು. ಇವರ ಮಕ್ಕಳಾದ ಶ್ರೀ ಕೆ.ಜಿ. ವೆಂಕಟೇಶ್ (ಕಾರ್ಯಕಾರಿ ಸಮಿತಿ ಸದಸ್ಯ) ಶ್ರೀನಿವಾಸ್, ಸೇತುರಾಮ್, ಸುಂದರ್, ಸಹೋದರ ಸಂಬಂಧಿಗಳಾದ ಶ್ರೀ ಕೆ.ಬಿ.ಎಸ್. ಶರ್ಮ (ಕಾರ್ಯಕಾರಿ ಸಮಿತಿ ಸದಸ್ಯ) ಮುರುಳಿ, ಸುರೇಶ ಹಾಗೂ ಕೆ.ಎಸ್. ಅನಂತ (ಕಾರ್ಯಕಾರಿ ಸಮಿತಿ) ಎಲ್ಲಾ ಮೊಮ್ಮಕ್ಕಳು ಸಂಘದ ಸದಸ್ಯರಾಗಿರುತ್ತಾರೆ.

ಭಗವಂತನು ಇವರ ಕುಟುಂಬದ ಪ್ರತಿ ಸದಸ್ಯರಿಗೂ ಸನ್ಮಂಗಳವನ್ನುಂಟುಮಾಡಬೇಕೆಂದು ಸಂಘ ಪ್ರಾರ್ಥಿಸುತ್ತದೆ.

**–ಸಂ**



## ಶ್ರೀ ಶ್ರೀನಿವಾಸ ಕಲ್ಯಾಣ – ನನ್ನನಿಸಿಕೆ

ಇದೇ 6–12–2015 ಭಾನುವಾರ ಕಿತ್ತಿಗಾನಹಳ್ಳಿ ಶ್ರೀ ನಾಗೇಶ್ವರ ಕ್ಷೇತ್ರದಲ್ಲಿ ನೆರವೇರಿದ ಸಾಮೂಹಿಕ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವದಲ್ಲಿ ನಾನೂ ಭಾಗಿಯಾಗಿದ್ದೆ. ಸಮುದಾಯದ ದಂಪತಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ಸಂತಸದ ವಿಷಯ. ವೇ. ಬ್ರ. ಶ್ರೀ ನಂಜುಂಡ ದೀಕ್ಷಿತರ ನೇತೃತ್ವದಲ್ಲಿ ಪೂಜಾಕಾರ್ಯ ಮಂಗಳ ಧ್ವನಿ ಸಹಿತ ಆರಂಭವಾಗಿ, ಪ್ರಧಾನ ಗುರುವರ್ಯರಿಂದ ಕಲ್ಯಾಣೋತ್ಸವದ ಕುರಿತಾದ ಪ್ರಾಸ್ತಾವಿಕ ನುಡಿಗಳು, ಮಹಿಮೆ ಇತ್ಯಾದಿ ಉದಾಹರಣೆ ಸಹಿತ ಮನಮುಟ್ಟುವಂತೆ ಇತ್ತು. ವೇದಘೋಷ ಕಲ್ಯಾಣೊತ್ಸವದ ಕುರಿತಾದ ಮಹಿಳೆಯರ ಹಾಡು, ಶ್ಲೋಕಗಳು, ಋತ್ವಿಕರಿಗೆ ಸಮಿತಿಯವರಿಂದ ಸರಳ ಸನ್ಮಾನ ಇವೆಲ್ಲ ಇದ್ದು ಮಹಾಮಂಗಳಾರತಿ, ಮಹಾಪ್ರಸಾದದೊಂದಿಗೆ ಮುಕ್ತಾಯವಾಯಿತು.

ಭಕ್ತಾದಿಗಳಿಗೆ ಲಘು ಉಪಾಹಾರದ ವ್ಯವಸ್ಥೆ, ಪ್ರಸಾದ ರೂಪದ ಭೋಜನ ಅತ್ಯುತ್ತಮವಾಗಿದ್ದು, ಹಿರಿಯ, ಕಿರಿಯ ಸದಸ್ಯ ಬಂಧುಗಳ ಸಹಕಾರ ಮೆಚ್ಚುವಂಥದ್ದು. ಬರೆಯಲೇಬೇಕಾದ್ದು ವಿಶೇಷವಾಗಿ ಅವರೇಕಾಯಿಯ ವ್ಯಂಜನ. ಹಿಂದಿನ ನಮ್ಮ ಸಂಚಿಕೆಯಲ್ಲಿ ಶ್ರೀ ವಿ.ಎಸ್.ಎಂ. ಅವರೇಕಾಯಿ ಕುರಿತಾದ ಲೇಖನ ನೆನಪಿಗೆ ಬಂತು.

ಒಟ್ಟಿನಲ್ಲಿ ದೇವರ ಕಲ್ಯಾಣೋತ್ಸವವಾಗಿ ವಿಜೃಂಭಣೆಯಾಗಿಸಿದ್ದಕ್ಕೆ ಸಮಿತಿಯವರಿಗೆ ಗೌರವಪೂರ್ವಕ ಅಭಿನಂದನೆ. ಇಂತಹ ಕಾರ್ಯಕ್ರಮಗಳಲ್ಲಿ ನಮ್ಮ ಪ್ರಿಯ ಬಂಧುಗಳು ಹೆಚ್ಚಾಗಿ ಪಾಲ್ಗೊಂಡು ಇನ್ನೂ ಹೆಚ್ಚಿನ ರೀತಿಯಲ್ಲಿ ನಡೆಸಬೇಕೆಂದು ಮನವಿ.

ಇಂತಿ ತಮ್ಮ ವಿಶ್ವಾಸಿ ಸದಸ್ಯ

**ಎಸ್ಸೆನ್ಕೆ, ಅರಶಿನಕುಂಟೆ**



**ಕಲ್ಯಾಣೋತ್ಸವದಲ್ಲಿ ದಂಪತಿಗಳು**

# ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ



ನಾಗೇಶ್ವರ ಕ್ಷೇತ್ರವಾದ ಕಿತ್ತಿಗಾನಹಳ್ಳಿಯಲ್ಲಿ ಮೈಸೂರು ದ್ರಾವಿಡ ಬೃಹಚ್ಚರಣ ಸಂಘವು ತಾ॥ 6–12–2015ರ ಭಾನುವಾರದಂದು ಭೂನೀಳಾ ಸಮೇತ ಶ್ರೀನಿವಾಸ ದೇವರ ಕಲ್ಯಾಣೋತ್ಸವ ಕಾರ್ಯಕ್ರಮ ವೇ॥ ಬ್ರ॥ ಶ್ರೀ॥ ನಂಜುಂಡ ದೀಕ್ಷಿತರು ಹಾಗೂ ಅವರ ಸೋದರರ ನೇತೃತ್ವದಲ್ಲಿ ನಡೆಯಿತು. ಉತ್ಸವಮೂರ್ತಿಗಳನ್ನು ದೇವಾಲಯದಿಂದ ಮಂಗಳವಾದ್ಯ, ಮಂಗಳದ್ರವ್ಯ, ಪೂಜಾ ಸಾಮಗ್ರಿಗಳೊಂದಿಗೆ, ಕಲ್ಯಾಣ ಮಂಟಪಕ್ಕೆ ಮೆರವಣಿಗೆಯಲ್ಲಿ ಕರೆತಂದರು.

ಕಲ್ಯಾಣೋತ್ಸವದಲ್ಲಿ ಭಾಗವಹಿಸಿದ್ದ ದಂಪತಿಗಳಿಂದ ಸಂಕಲ್ಪ, ಗಣಪತಿ ಪೂಜೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಸಂಪ್ರದಾಯದಂತೆ ಕಾರ್ಯಕ್ರಮದಲ್ಲಿ ಜೀರಿಗೆ–ಬೆಲ್ಲ ಧಾರೆ, ಮಾಂಗಲ್ಯ ಧಾರಣೆ ಮುಂತಾದವು ನಡೆದದ್ದು ಸಾಕ್ಷಾತ್ ಭಗವಂತನ ಕಲ್ಯಾಣವನ್ನು ವೀಕ್ಷಿಸಿದಂತೆ ನೆರೆದಿದ್ದ ಭಕ್ತ ಸಮೂಹವು ಅನುಭವಿಸಿತು. ಸಮುದಾಯದವರೆಲ್ಲಾ ಭಕ್ತಿಶ್ರದ್ಧೆಯಿಂದ ಕಲ್ಯಾಣೋತ್ಸವದಲ್ಲಿ ಪಾಲ್ಗೊಂಡರು. ಸಂಘದಿಂದ ಪ್ರತಿ ದಂಪತಿಗಳಿಗೆ ಪೂಜಾದ್ರವ್ಯ, ಶ್ರೀನಿವಾಸ ದೇವರ ಚಿತ್ರಪಟಗಳನ್ನು ಒದಗಿಸಲಾಗಿತ್ತು. ಮಹಾ ಮಂಗಳಾರತಿ, ತೀರ್ಥಪ್ರಸಾದ ರೂಪವಾದ ಭೋಜನ ಏರ್ಪಡಿಸಲಾಗಿತ್ತು.

ನಮ್ಮ ಸಮುದಾಯದವರೇ ಆದ ಡಾ॥ ಜಿ. ಸ್ವಾಮಿನಾಥ್‌ರವರು ಶ್ರೀ ಭೂನೀಳಾ ಸಮೇತ ಶ್ರೀನಿವಾಸದೇವ ಕಲ್ಯಾಣೋತ್ಸವಕ್ಕೆ ಮಾಂಗಲ್ಯ ಮಾಡಿಸಿಕೊಟ್ಟರು. ನಮ್ಮ ಸಂಘದ ಖಜಾಂಚಿ ಶ್ರೀ ಸತ್ಯನಾರಾಯಣ್ ರವರು ತಮ್ಮ ಹಿರಿಯ ಸಹೋದರರಾದ ದಿ॥ ಗೋಪಾಲಕೃಷ್ಣರವರ ಜ್ಞಾಪಕಾರ್ಥವಾಗಿ ಒಂದು ಲಕ್ಷ ರೂಪಾಯಿಗಳನ್ನು ದೇಣಿಗೆಯಾಗಿ ನೀಡಿದರು. ಶ್ರೀಯುತರನ್ನು ಸಂಘದ ಮಹಾ ಪೋಷಕರನ್ನಾಗಿಸಲು ಕಾರ್ಯಕಾರಿ ಸಮಿತಿ ಅನುಮೋದಿಸಿತು.

ಸಂಘದ ಸದಸ್ಯರಾದ ಶ್ರೀ ಮಂಜುನಾಥ್ ದಂಪತಿಗಳು ತಮ್ಮ ವಿವಾಹದ 25ನೇ ವರ್ಷದ ಅಂಗವಾಗಿ ಕಾಶಿ ಕ್ಷೇತ್ರಕ್ಕೆ ತೆರಳಿದ್ದು ಅಲ್ಲಿನ ಗಂಗಾತೀರ್ಥ ಮತ್ತು ಪ್ರಸಾದವನ್ನು ಕಲ್ಯಾಣೋತ್ಸವದಲ್ಲಿ ಪಾಲ್ಗೊಂಡ ದಂಪತಿಗಳಿಗೆ ವಿತರಿಸಿದರು. ಅನ್ನದಾನಕ್ಕೆಂದು ರೂ. 10,000/– ಸಂಘಕ್ಕೆ ನೀಡಿದರು.

ಶ್ರೀಮತಿ ಸುಮಿತ್ರರವರು ತಮ್ಮ ಪತಿ ದಿ॥ ನಾಗರಾಜ್‌ರವರ 80ನೇ ವರ್ಷದ ನೆನಪಿಗಾಗಿ ಸಂಘಕ್ಕೆ ರೂ. 10,000/–ಗಳನ್ನು ನೀಡಿದರು.









ಸಂಘದ ಸ್ವಯಂ ಸೇವಕರು

ಸಂಘದ ಪರವಾಗಿ ಅಧ್ಯಕ್ಷರು ಮತ್ತು ಕಾರ್ಯಕಾರಿಣಿ ಸದಸ್ಯರು ಎಲ್ಲಾ ದಾನಿಗಳನ್ನು, ಪ್ರಾಯೋಜಕರನ್ನು ಅಭಿನಂದಿಸಿದ್ದಾರೆ.

–ಸಂ.

# ಶ್ರೀ ಶ್ರೀನಿವಾಸ ಕಲ್ಯಾಣೋತ್ಸವದಲ್ಲಿ ಭಾಗವಹಿಸಿದವರು

















# ಶ್ರೀ ಶ್ರೀನಿವಾಸ ಕಲ್ಯಾಣೋತ್ಸವದಲ್ಲಿ ಭಾಗವಹಿಸಿದವರು

















## ಕಲ್ಯಾಣೋತ್ಸವದಲ್ಲಿ ಭಾಗವಹಿಸಿದ ದಂಪತಿಗಳು

*ಶ್ರೀಯುತರಾದ*

ಜಿ.ಎಸ್. ಸತ್ಯಮೂರ್ತಿ
ಅಜಯ್ ರಾವ್
ಭಗವಾನ್ ಆರ್.
ಶ್ರೀನಿವಾಸಯ್ಯ ಎಸ್.
ಸತ್ಯನಾರಾಯಣ ಎಸ್.
ಅರವಿಂದ ಎಸ್.
ಜಿ.ವಿ. ಸುಬ್ಬಣ್ಣ
ಚಂದ್ರಶೇಖರಯ್ಯ ಎನ್.
ಡಾ. ಆದಿಶೇಷ
ಸೇತುರಾಮ್ ಕೆ.ಜಿ.
ಜಗನ್ನಾಥ್ ಟಿ.ಪಿ.
ವೆಂಕಟೇಶ್ ಆರ್. ಎಸ್.
ರವೀಂದ್ರ
ಜಿ.ವಿ. ಶ್ಯಾಮ್
ಗಣೇಶ್ ಎನ್.
ರಮೇಶ್ ಬಾಬು ಎಸ್.
ಶಾರ್ವರಿ ಶ್ರೀನಿವಾಸನ್
ಶ್ರೀನಿವಾಸನ್ ಎಸ್.
ಡಾ. ಸ್ವಾಮಿನಾಥ್ ಜಿ.
ಅಶೋಕ್ ಕುಮಾರ್ ಜಿ.
ರವಿ ಕುಮಾರ್ ಎಸ್.
ರಮೇಶನ್ ಟಿ.ಎಸ್.
ರವಿ ವೀಣಾ
ಕೃಷ್ಣಸ್ವಾಮಿ ಛಾಯಾಪತಿ
ವಿಮಲ ಶ್ರೀನಿವಾಸಮೂರ್ತಿ
ಗುಣೇಶ್ ಕುಮಾರ್ ಟಿ.ಸಿ.
ಸೂರ್ಯನಾರಾಯಣ ಟಿ.ಪಿ.
ಅಶೋಕ್ ವಿ.
ರಾಮಕೃಷ್ಣ ವಿ.
ಬಿ.ಎನ್.ಜಿ. ಪ್ರಸಾದ್
ವಿಜಯ ಕುಮಾರ್ ರಾಮಮೂರ್ತಿ
ಬಿ.ಎನ್. ಗೋಪಿ
ಛಾಯಾಪತಿ ವಿ.
ಎಂ.ಪಿ. ರಂಗನಾಥ
ವೆಂಕಟೇಶ್ ಎಲ್.
ಶ್ರೀಹರಿ ಎನ್.ಎಸ್.

### ವಿದ್ಯಾನಿಧಿಗೆ ದಾನಿಗಳು

ಶ್ರೀಮತಿ ಸಾವಿತ್ರಿ 2000/–

## ಕಲ್ಯಾಣೋತ್ಸವದ ದಾನಿಗಳು

*ಶ್ರೀಯುತರಾದ*

ಎ.ಆರ್. ಕೃಷ್ಣಶರ್ಮ
ಜಯರಾಮನ್ ಎಂ.ಆರ್.
(ಮಾಂಗಲ್ಯ ಸೇವೆ)
ಸುಬ್ರಹ್ಮಣ್ಯಂ ಎ.ಎಂ.
ಸುಬ್ರಹ್ಮಣ್ಯಂ ಬಿ.
ತಾರಾ ರವೀಂದ್ರ
ಟಿ.ಎನ್. ರವಿ ಕಿರಣ್
ಸುಬ್ರಹ್ಮಣಿ ಕೆ.
ಶ್ರೀನಿವಾಸ ಎಸ್.ಸಿ.
ವೆಂಕಟೇಶ್ ಪ್ರಸಾದ್ ಆರ್.
ಪ್ರದೀಪ ಎಸ್.
ಕೃಷ್ಣಸ್ವಾಮಿ ಹೆಚ್.
ರಘುನಂದನ್ ಎಸ್.
ಡಾ. ರಮಾದೇವಿ ಎಸ್.
ಮಂಜುನಾಥ ಆರ್.ಎನ್.
ಪದ್ಮಾವತಿ ಸೂರಪ್ಪ
ಶ್ರೀನಿವಾಸ್ ಎಸ್.
ಲಲಿತಾ ಮೂರ್ತಿ
ಟಿ.ಎಸ್. ಕೃಷ್ಣನ್
ಭಾಗ್ಯಲಕ್ಷ್ಮೀ ಚಂಪಕಧಾಮ
ನಿತ್ಯಶ್ರೀ ಅನಂತ
ರಮೇಶ್ ಆರ್.
ರಾಮಕೃಷ್ಣ ಹೆಚ್. ಪಿ.
ಸಾವಿತ್ರಮ್ಮ ಆರ್.
ರಾಜೇಶ್ವರಿ ಅಶೋಕ್
ಶಂಕರ್ ಪ್ರಸಾದ್ ಬಿ.ಆರ್.
ಕೃಷ್ಣ ಎ.ಆರ್.
ಅಶೋಕ್ ಕುಮಾರ್ ಜಿ.
ಡಾ. ಸ್ವಾಮಿನಾಥ ಜಿ.
ರಾಮಕೃಷ್ಣ ವಿ.
ಮುರಳಿಕೃಷ್ಣ
ನಾಗೇಶ ಎಸ್.
ಸರಸ್ವತಿ ನಟರಾಜ್
ಶುಭ ಗಾಯತ್ರಿ
ಸಂದೀಪ್ ಸ್ಫೂರ್ತಿ
ತಮ್ಮಣ್ಣ ಪಿ.ಎಸ್.
ಪ್ರಸಾದ್ ಎಸ್.ಎಸ್.
ಎಂ.ಆರ್.ಎಸ್. ಶೇಖರ್
ಸುಮಿತ್ರಮ್ಮ ನಾಗರಾಜ್
ಗಣೇಶ್ ಶ್ರೀಧರ್ ಆರ್.
ಕೆ.ಬಿ.ಎಸ್. ಮಣಿ
ಭರತ್ ಶರ್ಮ
ಅರುಣ್ ವಿ.
ವಿಮಲ ಜಯರಾಮನ್
ವೆಂಕಟೇಶ್ ಜಿ.ಎಸ್.
ಬಿ.ಎಸ್. ಸೂರ್ಯನಾರಾಯಣ
ರವಿ (ಶ್ರೀನಿವಾಸ)
ಗಣೇಶನ್
ಪ್ರಭು ಎನ್.ಎಸ್.
ನರಸಿಂಹ ವಿ.
ಶ್ರೀನಿವಾಸ ಎನ್. (ಆನೇಕಲ್)
ರಾಜನ್ ವಿ.ಜಿ.
ಸತ್ಯನಾರಾಯಣ ಎಸ್.
ಗೌರಮ್ಮ ಜಿ.ಎಸ್. ಮತ್ತು ಮಕ್ಕಳು
ರವೀಂದ್ರ ರಾಮ್ ಟಿ.ಎನ್.
ಮಂಗಳ ಅರುಣ್
ಗೋಪಾಲ್ ರಾವ್ ಎಸ್.ವಿ.
ರಮೇಶ್ ಆರ್.ಎಸ್.
ಶ್ರೀಕಂಠೇಶ್ವರ ಕೆ.
ಗಿರಿ ಕೆ.ಆರ್.
ವೆಂಕಟಸುಬ್ಬಯ್ಯ
ನಾಗರಾಜು ಕೆ.ಜಿ.
ಶ್ರೀನಿವಾಸ ರಾವ್
ಕಲ್ಯಾಣರಾಮನ್ ಚಂದ್ರಶೇಖರ್
ನಾಗರಾಜ ಐಯ್ಯರ್
ವಿ.ಎಸ್. ಮಣಿ
ಕೃಷ್ಣಮೂರ್ತಿ ಬಿ.ಎಸ್.
ಓ.ಎಸ್. ಮಣಿ
ಡಾ. ಆದಿಶೇಷನ್
ಕರ್ಪಗಂ ಬಿ.ಎ.
ರಮೇಶ್ ಟಿ.ಎಸ್.
ಬಿ.ಎನ್.ಜಿ. ಪ್ರಸಾದ್
ಎಸ್. ಶಂಕರ್
ಅನಂತ ರಾಘವನ್
ಶಿವಕುಮಾರ್ ಎನ್.

### ಸಂಘಕ್ಕೆ ನೂತನ ಸದಸ್ಯರು

ಸವಿತಾ ಜಿ.ಎಲ್.
ಲಲಿತಾ ಕೃಷ್ಣಮೂರ್ತಿ
ಭಾನುಮತಿ ಗುಂಡಪ್ಪ
ವಸಂತ ಬಿ.ಪಿ.
ನಳಿನಿ ತ್ಯಾಗರಾಜನ್

# ಸಂಘದಿಂದ ಅಭಿನಂದನೆ




ಸಂಘದ ಸದಸ್ಯರಾದ ಶ್ರೀ ವಿಜಯಕುಮಾರ್ ಎಸ್.ಆರ್. ರವರ ಪುತ್ರಿ ಚಿ. ರಮ್ಯ ವಿ. ರವರು ಗಣಕಯಂತ್ರ ಬಳಕೆಯರಿವು ಕ್ಷೇತ್ರದಲ್ಲಿ `Free & Open Source Software Ideology' ಎಂಬುದರ ತಾಂತ್ರಿಕ ಸಂಶೋಧನೆಯ ಬಗ್ಗೆ Computer Society of India ದವರು ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಅಧಿವೇಶನದಲ್ಲಿ ತಮ್ಮ ಪ್ರಸ್ತುತಿಗೆ 'ಉತ್ತಮ ಕೃತಿ' ಎಂಬ ಪ್ರಶಸ್ತಿ ಗಳಿಸಿರುವುದಕ್ಕೆ ಬೃಹಚ್ಚರಣ ಸಂಘ ಅಭಿನಂದಿಸುತ್ತದೆ.

* * *

ಸಮುದಾಯದ ಸದಸ್ಯ ಗುಂಜೂರು ವೆಂಕಟೇಶ್ ಮತ್ತು ಶ್ರೀಮತಿ ಶಾಂತರವರ ಪುತ್ರ ದೀಪಕ್ ವೆಂಕಟೇಶ್‌ರವರ 'ಕೌನ್ ಕಿತನೇ ಪಾನಿ ಮೆ' ಎಂಬ ಹಿಂದಿ ಚಲನಚಿತ್ರಕ್ಕೆ ಕಥೆ ಮತ್ತು ಚಿತ್ರಕಥೆಯನ್ನು ಬರೆದಿದ್ದು 28–08–2015ರಂದು ಭಾರತದಾದ್ಯಂತ ತೆರೆ ಕಂಡಿರುತ್ತದೆ. ಚಿತ್ರ ವೀಕ್ಷಿಸಿದ ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್‌ರವರು ದೀಪಕ್‌ರವರನ್ನು ಪ್ರಶಂಸಿಸಿದ್ದಾರೆ.

* * *

ನಮ್ಮ ಸಂಘದ ಸದಸ್ಯ ಭಾರತ ಸರ್ಕಾರದ ವಿಜ್ಞಾನ ಮತ್ತು ಸಂಶೋಧನಾ ವಿಭಾಗದ ವಿಜ್ಞಾನಿ ಹಾಗೂ ಸಂಘದ ಸದಸ್ಯ ಡಾ|| ಮುಗಳೂರು ಶ್ರೀಕಂಠಯ್ಯನವರ ಪುತ್ರ ಡಾ|| ಎಂ.ಎಸ್. ಶಶಿಕುಮಾರ್‌ರವರು ದೆಹಲಿ ಕರ್ನಾಟಕ ಸಂಘದ ನೂತನ ಕಾರ್ಯಕಾರಿ ಸಮಿತಿಗೆ ಹಾಗೂ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಸಮಿತಿಗೆ ಆಯ್ಕೆ ಆಗಿರುವುದನ್ನು ಸಂಘ ಅಭಿನಂದಿಸುತ್ತದೆ.

* * *



ನಮ್ಮ ಸಂಘದ ಸದಸ್ಯರಾದ ಶ್ರೀ ಮುತ್ತುಸ್ವಾಮಿ ಹಾಗೂ ಶ್ರೀಮತಿ ಮಾನಸರವರ ಮೊಮ್ಮಗ, ಶ್ರೀ ಸುಮಂತ್ ಹಾಗೂ ಶ್ರೀಮತಿ ಮೇಘಾರವರ ಮಗನಾದ ಚಿ. ಅಭಯ್.ಎಸ್ ತನ್ನ ಏಳನೇ ವಯಸ್ಸಿನಲ್ಲಿಯೇ ಸಾಮೂಹಿಕ ಕೀಬೋರ್ಡ್ ವಾದನದಲ್ಲಿ 'ಲಿಮ್ಕ ಬುಕ್ ಆಫ್ ರೆಕಾರ್ಡ್ಸ್'ನಲ್ಲೂ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದ್ದಾನೆ.

# 'ಮಂಕುತಿಮ್ಮನ ಕಗ್ಗ'ದ ತಾತ್ಪರ್ಯ



ಜನ್ಮ ಸಾವಿರ ಬರಲಿ... ನಷ್ಟವದರಿಂದೇನು?
ಕರ್ಮ ಸಾವಿರ ಬರಲಿ..... ಕಷ್ಟ ನಿನಗೇನು?
ಬ್ರಹ್ಮ ಹೃದಯದಿ ನಿಲ್ಲೆ
ಮಾಯೆಯೇಂಗೈದೊಡೇಂ
ಇಮ್ಮಿದಳ ಸರಸವಿದು – ಮಂಕುತಿಮ್ಮ !!

ಆ ಪರಬ್ರಹ್ಮನು ಆನಂದಕ್ಕಾಗಿ ಕಲ್ಪಿಸಿಕೊಂಡಿರುವ ಈ ಸ್ಥಾನವನ್ನು ನಾವು ವಿಶ್ವ ಅಥವಾ ಜಗತ್ತು ಎಂದು ಹೇಳುತ್ತೇವೆ. ಈ ವಿಚಾರವನ್ನು ನಾವು ಪ್ರಜ್ಞಾಪೂರ್ವಕವಾಗಿ ತಿಳಿದರೆ, ಎಷ್ಟು ಜನ್ಮ ಬರಲಿ, ಎಷ್ಟು ಕರ್ಮ ಬರಲಿ, ಅದರಿಂದ ಕಷ್ಟವೂ ಇಲ್ಲ, ನಷ್ಟವೂ ಇಲ್ಲ, ಎಂದು ತಿಳಿಯಬಹುದು.

'ಏಸು ಜನ್ಮ ಬಂದರೇನು ದಾಸನಲ್ಲವೇನು ನಾನು ಘಾಸಿ ಮಾಡದಿರು ಎನ್ನ ವಾಸುದೇವನೇ' ಎಂದಿರುವ ಭಕ್ತ ಕನಕದಾಸರ ಮುತ್ತಿನಂತಹ ನುಡಿ ನಮ್ಮ ಜ್ಞಾಪಕಕ್ಕೆ ಬರುತ್ತದೆ. ಅದರಂತೆಯೇ ಎಷ್ಟೇ ಪ್ರಾರಬ್ಧ ಕರ್ಮ ಬಂದರೂ, ಅಧೀರರಾಗದೆ, ಅದನ್ನು ಎದುರಿಸಿ ಬಾಳಿದಂತ ಎಷ್ಟೋ ಮಹನೀಯರು ನಮ್ಮ ಇತಿಹಾಸದಲ್ಲಿ ಇದ್ದಾರೆ. ಅಷ್ಟೇ ಏಕೆ? ಭಗವಂತನು ತ್ರೇತಾ ಮತ್ತು ದ್ವಾಪರ ಯುಗಗಳಲ್ಲಿ ಮಾನವನಾಗಿ ಅವತಾರ ಎತ್ತಿದ್ದಾನೆ. ಧರ್ಮ ರಕ್ಷಣೆಗಾಗಿ ರಾಮ ಪಟ್ಟ ಕಷ್ಟ ಎಷ್ಟು? ಅಂತೆಯೇ ಶ್ರೀ ಕೃಷ್ಣ ಶಿಷ್ಟ ರಕ್ಷಣ – ದುಷ್ಟ ಶಿಕ್ಷಣಕ್ಕಾಗಿ ಕಷ್ಟ ಪಡಲಿಲ್ಲವೇ? ಶ್ರೀ ಕೃಷ್ಣ ಮಗುವಾಗಿದ್ದಾಗ, ದಿನನಿತ್ಯವೂ ಗಂಡಾಂತರವೇ? ಏನೇ ಕಷ್ಟ ಬಂದರೂ, ಶ್ರೀ ರಾಮ ಮತ್ತು ಶ್ರೀ ಕೃಷ್ಣರು ಮಾದರಿಯಾಗಿ ಬಾಳಲಿಲ್ಲವೇ? ಕಷ್ಟ ಪಡುವುದನ್ನು ಇಷ್ಟವಾಗಿ ಅನುಭವಿಸಬೇಕೆಂಬುದೇ ಇದರ ತತ್ವ.

ಆದ್ದರಿಂದ, ಎಷ್ಟೇ ಜನ್ಮ ಬರಲಿ, ಎಷ್ಟೇ ಪ್ರಾರಬ್ಧಕರ್ಮ ಇರಲಿ, ಇವೆಲ್ಲವೂ ಬ್ರಹ್ಮನ ಎಳಸಿಕೆಯಾದ ಮಾಯೆಯ ಆಟ. ಅವಳು ಹೇಗಾದರೂ ತನ್ನ ಸೆಳೆತಕ್ಕೆ ನಮ್ಮನ್ನು ಸಿಲುಕಿಸುತ್ತಾಳೆ. ಅದರಿಂದ ನಾವು ಧೈರ್ಯಗೆಡಬಾರದು. ನಮ್ಮ ಹೃದಯದಲ್ಲಿ ಆ ಪರಮಾತ್ಮನಿಗೆ ಸ್ಥಾನವನ್ನು ಕೊಟ್ಟು 'ಇದು ಅವನ ಲೀಲೆ' ಎಂದು ನಮಗೆ ಮನವರಿಕೆಯಾದರೆ, ಆ ಮಾಯೆಯ ಆಟವೂ ಇನಿಯಳ ಜೊತೆ ಸರಸವಾಡಿದಂತಿರುತ್ತದೆ ಎಂದಿದ್ದಾರೆ ಪೂಜ್ಯ ಶ್ರೀ ಡಿ.ವಿ. ಗುಂಡಪ್ಪ.

ಪದಕೋಶ: ಇಮ್ಮಿದಳ ಎಂದರೆ ಇನಿಯಳು ಎಂದರ್ಥ

**ಶ್ರೀಮತಿ ಜಿ.ಪಿ. ಲಕ್ಷ್ಮಿದೇವಿ**
ದೂರವಾಣಿ : 080–23444798

## ನಮ್ಮನ್ನಗಲಿದ ನಮ್ಮವರಿಗೆ–ಸಂಘದ ಶ್ರದ್ಧಾಂಜಲಿ

1. **ಶ್ರೀ ಎಮ್.ಎಸ್. ಸುರೇಶ್** (70), ಮಟ್ಟನಹಳ್ಳಿ, ಶ್ರೀ ಶ್ರೀಕಂಠಶರ್ಮರವರ ಪುತ್ರ
2. ಸದಸ್ಯ **ತಟ್ಟನಹಳ್ಳಿ ಶ್ರೀ ರಾಧಾಕೃಷ್ಣ** (84), ಸದಸ್ಯ ನಾಗಭೂಷಣ್ ಅವರ ತಂದೆ.
3. **ಶ್ರೀ ಬಿ.ಎಸ್. ಶಿವಪ್ರಸಾದ್** (84) 25–11–2015, ಎ.ವಿ. ಲಕ್ಷ್ಮಣ ಅಯ್ಯರ್ ಅವರ ಹಿರಿಯ ಅಳಿಯ.
4. **ಶ್ರೀಮತಿ ಎನ್. ರಾಜಮ್ಮ** 16–12–2015, ಬಿನ್ನಮಂಗಲಂ ನಾರಾಯಣ ಸ್ವಾಮಿ ಪತ್ನಿ
5. **ಲೀಲಾವತಿ ಶ್ರೀನಿವಾಸ್** (74 ವರ್ಷ), 30.12.2015, ಸದಸ್ಯ ಗುರುಪ್ರಸಾದ್ ಅವರ ತಾಯಿ ಹಾಗೂ ಸಂಘದ ಸಂಸ್ಥಾಪಕ ಶ್ರೀಕಂಠೇಶ್ವರ ಅಯ್ಯರ್ ಪುತ್ರಿ.
6. **ವೇದವತಿ ರಾಮಸ್ವಾಮಿ**, (85 ವರ್ಷ) ಮೈಸೂರು, ಸದಸ್ಯ ಎಂ.ಆರ್. ಸತ್ಯನಾರಾಯಣ ಅವರ ತಾಯಿ



# ಅಡುಗೆ ಕಟ್ಟೆ

## ಮಾಕಳಿ ಬೇರಿನ ಚಿತ್ರಾನ್ನ

### ಬೇಕಾಗುವ ಪದಾರ್ಥಗಳು

ಮಾಕಳಿ ಬೇರು, ಒಣ ಕೊಬ್ಬರಿ, ಮೆಂತ್ಯ, ಇಂಗು, ಬಿಳಿ ಎಳ್ಳು

ಒಣ ಮೆಣಸಿನಕಾಯಿ (ಬ್ಯಾಡಗಿ+ಗುಂಟೂರು), ಹುಣಿಸೆ ಹಣ್ಣು, ಸ್ವಲ್ಪ ಬೆಲ್ಲ

ಚಿತ್ರಾನ್ನ ಮಾಡಲು ಅನ್ನವನ್ನು ತಯಾರಿಸಿಕೊಳ್ಳಬೇಕು

ಮಾಕಳಿ ಬೇರನ್ನು ಚೆನ್ನಾಗಿ ನೀರಿನಲ್ಲಿ ತೊಳೆದು ಸಿಪ್ಪೆ ತೆಗೆದುಕೊಳ್ಳಿ, ಅದರ ಮಧ್ಯದಲ್ಲಿ ಗಟ್ಟಿಯಾದ ಕಡ್ಡಿ ಇರುತ್ತದೆ ಅದನ್ನೂ ಸಹ ತೆಗೆಯಬೇಕು. ಅದನ್ನು ತುರಿದುಕೊಳ್ಳಿ ಇಂಗು, ಮೆಂತ್ಯ, ಬಿಳಿಎಳ್ಳು, ಒಣ ಮೆಣಸಿನಕಾಯಿಯನ್ನು ಹುರಿದುಕೊಳ್ಳಿ, ಕೊಬ್ಬರಿಯನ್ನು ಬೆಚ್ಚಗೆ ಮಾಡಿಕೊಳ್ಳಿ, ತುರಿದ ಮಾಕಳಿ ಬೇರನ್ನು ಸ್ವಲ್ಪ ಬಿಸಿ ಮಾಡಿ. ಹುರಿದ ಪದಾರ್ಥಕ್ಕೆ ಹುಣಿಸೆ ಹಣ್ಣು, ಉಪ್ಪು, ಬೆಲ್ಲ ಬೆರೆಸಿ ಗಟ್ಟಿಯಾಗಿ ಚಟ್ನಿ ರುಬ್ಬಿಕೊಳ್ಳಿ. ಬಾಣಲೆಯಲ್ಲಿ ಎಣ್ಣೆ ಹಾಕಿ ಬಿಸಿ ಮಾಡಿ ಕಡಲೆಕಾಯಿ ಬೀಜ, ಸಾಸಿವೆ, ಉದ್ದಿನಬೇಳೆ, ಕರಿಬೇವು ಹಾಕಿ ಒಗ್ಗರಣೆ ಮಾಡಿಕೊಳ್ಳಿ ಅರಿಶಿನ ಪುಡಿಯನ್ನು ಹಾಕಿ, ನಂತರ ಅನ್ನಕ್ಕೆ ಒಗ್ಗರಣೆ ಹಾಕಿ, ಮಾಕಳಿ ಬೇರಿನ ಚಟ್ನಿ ಹಾಕಿ ಅನ್ನವನ್ನು ಕಲೆಸಿರಿ.

ಮಾಕಳಿ ಬೇರಿನ ಚಿತ್ರಾನ್ನ ರೆಡಿ !

## ಅವಲಕ್ಕಿ ಹಲ್ವ

**ಬೇಕಾಗುವ ಪದಾರ್ಥಗಳು :** ಅವಲಕ್ಕಿ, ಸಕ್ಕರೆ, ಹಾಲು, ತುಪ್ಪ, ಮೈದಾ ಹಿಟ್ಟು, ದ್ರಾಕ್ಷಿ, ಗೋಡಂಬಿ, ಏಲಕ್ಕಿ

**ಮಾಡುವ ವಿಧಾನ :** ಅವಲಕ್ಕಿಯನ್ನು ತೊಳೆದು ಹಾಲಿನಲ್ಲಿ ಅರ್ಧ ಗಂಟೆ ನೆನೆಸಿಡಿ, ನೆನೆಸಿದ ಅವಲಕ್ಕಿಯನ್ನು ಹಾಲಿನಲ್ಲೆ ಬೇಯಿಸಿಕೊಳ್ಳಿ. ಸಕ್ಕರೆಯನ್ನು ಬೆಂದ ಅವಲಕ್ಕಿಗೆ ಹಾಕಿ ಸಣ್ಣ ಉರಿಯಲ್ಲಿ ಕೆದಕುತ್ತಿರಿ, ಸಕ್ಕರೆ ಕರಗಿದ ಮೇಲೆ, ತುಪ್ಪದಲ್ಲಿ ಹುರಿದ ಗೋಡಂಬಿ, ದ್ರಾಕ್ಷಿ, ಏಲಕ್ಕಿ ಪುಡಿ ಹಾಕಿ. ನಂತರ ಸ್ವಲ್ಪ ತುಪ್ಪ ಬಿಸಿ ಮಾಡಿಕೊಂಡು ಅದಕ್ಕೆ ಸ್ವಲ್ಪ ಮೈದಾ ಹಿಟ್ಟು ಹಾಕಿ ಚೆನ್ನಾಗಿ ಬೆರೆಸಿ ಅದನ್ನು ಅವಲಕ್ಕಿಗೆ ಹಾಕಿ, ಚೆನ್ನಾಗಿ ಕಲಸಿ ಅವಲಕ್ಕಿ ಹಲ್ವ ರೆಡಿಯಾಗುತ್ತದೆ.

**ವಿ.ಸೂ. ಶುದ್ಧ ಹಸುವಿನ ತುಪ್ಪವನ್ನೇ ಉಪಯೋಗಿಸುವುದು.**



■ ವಿಜಯಲಕ್ಷ್ಮಿ ಶ್ರೀಕಂಠಯ್ಯ

### ವೋಡ್ದಾಫೋನು?–VODAFONE- ನನ್ನ ಅನಿಸಿಕೆ

ಮನೆಯ ಹಾಲಿನಲ್ಲಿ ಸೋಫಾದ ಮೇಲೆ ದಿನಪತ್ರಿಕೆ ಓದುತ್ತಾ ಕುಳಿತಿದ್ದಾಗ ರೂಮಿನಲ್ಲಿದ್ದ ಟೆಲಿಫೋನ್ ರಿಂಗಣಿಸಿತು. ಅಲ್ಲೇ ಇದ್ದ ನನ್ನ ಮಗ ಫೋನಿನಲ್ಲಿ ಮಾತಾಡಿ ಹೊರಗೆ ಬಂದಾಗ 'ವೋಡ್ದಾಫೋನು' ಎಂದು ನಮ್ಮ ಭಾಷೆಯಲ್ಲಿ ಕೇಳಿದೆ, ತಕ್ಷಣವೇ ನನಗನ್ನಿಸಿತು `VODAPHONE' ನಮ್ಮ ಭಾಷೆಯಿಂದಲೇ ಏಕೆ ಬಂದಿರಬಾರದೆಂದು.

– ಎಚ್.ಪಿ. ಶ್ರೀನಿವಾಸ್
*ಚಿಕ್ಕಲ್ಲಸಂದ್ರ*

# ಮಹಿಳೆಯರೇ ಹುಷಾರ್

ಶ್ರೀ ವರಮಹಾಲಕ್ಷ್ಮಿ ವ್ರತವನ್ನು ನಗರದ ಬಡಾವಣೆಗಳಲ್ಲಿ ವಿಜೃಂಭಣೆಯಿಂದ ಆಚರಿಸುತ್ತಾರೆ. ದೇವಿಗೆ ರೇಷ್ಮೆ ಸೀರೆ ಉಡಿಸಿ, ತಮ್ಮ ಬಳಿ ಇರುವ ಎಲ್ಲಾ ಆಭರಣಗಳಿಂದ ಅಲಂಕರಿಸಿ, ಪೂಜಿಸಿ ಸಂಜೆ ಸುಮಂಗಲಿಯರನ್ನು ಅರಿಶಿನ ಕುಂಕುಮಕ್ಕೆ ಆಹ್ವಾನಿಸುತ್ತಾರೆ. ಹೀಗೆ ಒಂದು ಮನೆಯಲ್ಲಿ ಲಕ್ಷ್ಮಿ ಪೂಜೆ ನೆರವೇರಿಸಿದಾಗ ನಡೆದ ನೈಜ ಘಟನೆಯನ್ನು ತಮ್ಮ ಮುಂದಿಡುತ್ತಿದ್ದೇನೆ.

ನಮ್ಮ ಬಡಾವಣೆಯ ಸದ್ಗೃಹಸ್ಥರೊಬ್ಬರ ಹೆಂಡತಿ, ಲಕ್ಷ್ಮೀ ಪೂಜೆ ಮಾಡಿ ಸುಮಂಗಲಿಯರನ್ನು ಸಂಜೆ ಆರತಿಗೆ ಕರೆದಿದ್ದರು. ಬಂದವರನ್ನು ಆತ್ಮೀಯತೆಯಿಂದ ಸ್ವಾಗತಿಸಿ ಕಾಫಿ ತರಲು ಒಳಗೆ ಅಡುಗೆ ಮನೆಗೆ ಹೋದರು. ಬಂದವರಲ್ಲಿ ಒಬ್ಬ ಸುಮಂಗಲಿಯು, ಯಾರೂ ಇಲ್ಲದ ಸಮಯದಲ್ಲಿ ದೇವಿಗೆ ಅಲಂಕಾರಕ್ಕಿಟ್ಟಿದ್ದ ಎರಡು ಚಿನ್ನದ ಬಳೆಗಳನ್ನು ತನ್ನ ಪರ್ಸಿಗೆ ಹಾಕಿಕೊಂಡು ಎಲೆ, ಅಡಿಕೆ ತೆಗೆದುಕೊಂಡು ಮನೆಗೆ ಹೊರಟಳು. ಮರುದಿನ ಮನೆಯಾಕೆ ದೇವರನ್ನು ಕದಲಿಸಿ ಒಡವೆಗಳನ್ನು ತೆಗೆಯುವಾಗ ಬಳೆ ಇಲ್ಲದಿರುವುದನ್ನು ಗಮನಿಸಿದ್ದಾರೆ. ತಾನು ಮನೆಗೆ ಕರೆದ ಹೆಂಗಸರನ್ನೆಲ್ಲಾ ಇದರ ಬಗ್ಗೆ ಫೋನ್ ಮಾಡಿ ವಿಚಾರಿಸಿದಾಗ ಎಲ್ಲರಿಗೂ ಆಶ್ಚರ್ಯ, ಮುಜುಗರ ಉಂಟಾಗಿ ತಮಗೆ ಗೊತ್ತಿಲ್ಲವೆಂದು ಹೇಳಿರುತ್ತಾರೆ. ಆದರೆ, ತಬ್ಬಿಬ್ಬಾಗಿ ವಿಚಿತ್ರವಾಗಿ ಉತ್ತರಿಸಿದ ಒಬ್ಬಾಕೆಯ ಮೇಲೆ ಸಂದೇಹ ಬಂದು ಪತಿಗೆ ತಿಳಿಸುತ್ತಾಳೆ. ಪತಿಯು ಪೊಲೀಸ್ ಇಲಾಖೆಯಲ್ಲಿ ಇದ್ದಿದ್ದುದರಿಂದ ಕದ್ದ ಹೆಂಗಸಿನಿಂದ ಮಾಡಿದ ತಪ್ಪನ್ನು ಬಾಯ್ಬಿಡಿಸಿದ್ದಾರೆ. ನಂತರದ ದಿನಗಳಲ್ಲಿ ಕದ್ದಾಕೆ ಬೇರೆ ಬಳೆಗಳನ್ನು ಮಾಡಿಸಿಕೊಟ್ಟು ಬೇರೆ ಊರಿಗೆ ತೆರಳಿದಳು.

ಈ ಪ್ರಸಂಗ ನಮ್ಮ ಬಡಾವಣೆಯ ಎಲ್ಲರ ಕಣ್ಣು ತೆರೆಸಿದೆ. ದೇವರಿಗೆ ಒಡವೆಗಳನ್ನು ಹಾಕಿ ಪ್ರದರ್ಶಿಸುವುದು ಯಾಕೆ? ಭಕ್ತಿ, ನಿಷ್ಠೆ, ನೇಮಗಳಿಲ್ಲದೆ ನಿರಾಡಂಬರವಾಗಿ ಪೂಜಿಸಿದರೆ ಸಾಲದೆ? ಪ್ರತಿಷ್ಠಿತ ಸಾಫ್ಟ್‌ವೇರ್ ಇಂಜಿನಿಯರ್ ಪತ್ನಿಯಾಗಿ ಈಕೆಯು ಕದ್ದು ತನ್ನ ಕುಟುಂಬದ ಮಾನ, ಮರ್ಯಾದೆಗಳನ್ನು ಹರಾಜಿಗಿಟ್ಟಿಲ್ಲವೆ? ಒಡವೆ ಹುಚ್ಚು ಮೋಹದಿಂದ ತನ್ನ ಸಂಸಾರವನ್ನು ಅಧೋಗತಿಗೆ ಕೊಂಡೊಯ್ದುದ್ದು ಸರಿಯೇ?

'ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರುವುದಿಲ್ಲ' ಈ ಪ್ರಸಂಗದಿಂದ ಒಂದು ಪಾಠವನ್ನು ಕಲಿಯುವಂತಾಯಿತು. ಮುಂದಿನ ದಿನಗಳಲ್ಲಿ ಅರಿಶಿನ ಕುಂಕುಮಕ್ಕೆ ಯಾರನ್ನು ಕರೆದರೂ ಯಾರಾದರೂ ಮನೆಯವರೊಬ್ಬರು ಬಹಳ ಜಾಗ್ರತೆಯಿಂದ ಇರಬೇಕೆಂದು ಪಾಠ ಕಲಿತಂತಾಗಿದೆ. ದೇವರಲ್ಲಿ ಭಕ್ತಿ ಇದ್ದರೆ ಸಾಕು, ಒಡವೆ ಶ್ರೀಮಂತಿಕೆ ಪ್ರದರ್ಶನ ಬೇಡ.



■ ಗಾಯತ್ರಿ ಶೇಷಾಚಲ
25630483

## ಕಳಚುತ್ತಿರುವ ಸಂಬಂಧಗಳ ಕೊಂಡಿ



ಇಂದಿನ ಕಾಲಘಟ್ಟದಲ್ಲಿ ಈ ನಮ್ಮ ಪ್ರೀತಿಯ ಅಪ್ಪುಗೆಯ ಆನಂದ ಕೇವಲ ಕೆಲಕಾಲ ಅಥವಾ ಕೆಲವು ವರ್ಷ ಮಾತ್ರ. ಕಾಲಚಕ್ರದ ಉರುಳಿದಂತೆ ಮಕ್ಕಳ ಹಾಗೂ ಪೋಷಕರ ನಡುವಿನ ಪ್ರೀತಿಯ ಪ್ರಾಮುಖ್ಯತೆಯ ದೃಷ್ಟಿಕೋನ ಬದಲಾಗಿ ಪ್ರೀತಿಯಿಂದ ಅಪ್ಪಿಕೊಂಡ ಕೈಗಳು ಕಾಲಕ್ರಮೇಣ ಸಡಿಲವಾಗುವುದು ಸಹಜ. ಇದು ಇತ್ತೀಚಿನ ದಿನಗಳಲ್ಲಿ ಎಲ್ಲ ಸಮುದಾಯಗಳಲ್ಲೂ ಕಾಣುವ ಪಿಡುಗು ಎಂದರೆ ತಪ್ಪಾಗಲಾರದು.

ನಮ್ಮ ನೇರ, ಸರಳ, ಆಕಾಂಕ್ಷೆ, ಅಪೇಕ್ಷೆ, ಆಚಾರ, ವಿಚಾರ, ಆತಂಕದ ಕಷ್ಟದ ದಿನಗಳ ಸರಮಾಲೆ, ಇವುಗಳ ವಿವರಣೆ ಯಾರಿಗೂ ಬೇಕಿಲ್ಲ. ಅವುಗಳಿಗೆ ಅರ್ಥವೂ ಇಲ್ಲ, ಬೆಲೆಯೂ ಇಲ್ಲ.

ಹಾಗಾಗಿ, ನಮ್ಮ ಅಂತ್ಯಕಾಲದ ನೆಮ್ಮದಿಯ ಬದುಕನ್ನು ನಾವೇ ಕಟ್ಟಿಕೊಳ್ಳುವುದು ಉತ್ತಮ ಹಾಗೂ ಅದು ಅನಿವಾರ್ಯ ಕೂಡ. ಆದಷ್ಟು ಮಕ್ಕಳಿಂದ ದೂರ ಉಳಿದು, ಅಲ್ಲಿಂದಲೇ ಅವರ ಸಂತೋಷ, ಏಳಿಗೆಗಾಗಿ ಪ್ರಾರ್ಥಿಸಿ ಹಾರೈಸುವುದು ಸಮಂಜಸ. ಅಗಲಿಕೆಯ ನೋವು ಕಾಡುತ್ತಿದ್ದಲ್ಲಿ, ನಮ್ಮ ಮಕ್ಕಳ ಸಣ್ಣವಯಸ್ಸಿನ ಭಾವಚಿತ್ರ ಇದ್ದಲ್ಲಿ ಅವುಗಳನ್ನು ಆಗಾಗ ನೋಡಿ, ಹಳೆಯ ಸವಿದಿನಗಳ ಮೆಲುಕು ಹಾಕಿ ತೃಪ್ತಿ ಕಂಡುಕೊಳ್ಳುವುದನ್ನು ಅಭ್ಯಾಸ ಮಾಡಿಕೊಳ್ಳೋಣ.

ಕಣ್ಣಂಚಿನಲ್ಲಿ ಕಂಬನಿಯ ಹನಿಗಳು ಇಳಿಯುತ್ತಿದ್ದಲ್ಲಿ, ನಾವೇ ಒರೆಸಿಕೊಳ್ಳುತ್ತಾ ನಮಗೆ ನಾವೇ ಸಾಂತ್ವನ ಹೇಳಿಕೊಂಡು ನೆಮ್ಮದಿಯ ನಿಟ್ಟುಸಿರು ಬಿಡುವುದನ್ನು ರೂಢಿಸಿಕೊಳ್ಳೋಣ.

ಆದರೂ, ಕಾಲಚಕ್ರ ಉರುಳಲೇಬೇಕು, ಪೀಳಿಗೆಗಳ ನಡುವಿನ ಸಂಬಂಧಗಳ ಕೊಂಡಿ ಭದ್ರವಾಗಿ ಬೆಸೆಯಬೇಕು, ಬೆಸೆಯುತ್ತದೆ ಎಂಬ ನಂಬಿಕೆ ಇರಲಿ. ಪ್ರೀತಿ, ವಾತ್ಸಲ್ಯ, ಸಂಬಂಧಗಳ ಬಗ್ಗೆ ಮಕ್ಕಳಿಗೆ ಸಣ್ಣ ವಯಸ್ಸಿನಿಂದಲೇ ಅರಿವು ಮೂಡಿಸಿ ಜೀವನದಲ್ಲಿ ಅವುಗಳಿಂದ ಆಗುವ ಉಪಯೋಗ, ಲಾಭ, ಪ್ರೀತಿಯ ಅನುಭವದ ಬಗ್ಗೆ ತಿಳಿಯಹೇಳುವ ಜವಾಬ್ದಾರಿ, ಕರ್ತವ್ಯ ನಮಗಿದ್ದಲ್ಲಿ, ಸಡಿಲವಾಗುತ್ತಿರುವ ಸಂಬಂಧಗಳ ಕೊಂಡಿಗಳು ಮತ್ತೆ ಭದ್ರವಾಗಿ ಬೆಸೆದು ಚಿರಕಾಲ ಉಳಿಯಬಲ್ಲದು ಎಂಬ ದೃಢವಾದ ನಂಬಿಕೆ, ಆಶಯದೊಂದಿಗೆ.



■ವಿ.ಎಸ್.ಮಣಿ
98450 55582

## ವಾರ್ತಾಚಿತ್ರ



ಆಚಾರ್ಯ ಪಾಠಶಾಲೆಯ ಹಿರಿಯ ಉಪಾಧ್ಯಾಯರನ್ನು ಸನ್ಮಾನಿಸಿದ ಸಮಾರಂಭದಲ್ಲಿ ನಮ್ಮ ಸಮುದಾಯದ ಪೋಷಕರಾದ ಶ್ರೀ ಬಿ.ಎಸ್. ಪದ್ಮನಾಭ ಹಾಗೂ ಸದಸ್ಯ ಶ್ರೀ ಮಧುಸೂದನ.



ಸಂಘದ ಸದಸ್ಯ, ಸಂಗೀತ ವಿದ್ವಾನ್ ಕಾರ್ತಿಕ್ (ಶ್ರೀಮತಿ ವಸುಮತಿ ಮತ್ತು ಶ್ರೀ ರವಿ ಅವರ ಪುತ್ರ) ಅವರಿಗೆ ಅನನ್ಯ ಸಂಸ್ಥೆಯಿಂದ ಪ್ರಶಸ್ತಿ ಪ್ರದಾನ

## ನಾಗಾರಾಧನೆ 2016



ಭಾನುವಾರ ತಾರೀಖು 13.03.2016ರಂದು ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರದಲ್ಲಿ ನಾಗಾರಾಧನೆಯನ್ನು ಏರ್ಪಡಿಸಲಾಗಿದೆ. ಸಮುದಾಯದವರು ಕುಟುಂಬ ಸಮೇತರಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಬೃಹಚ್ಚರಣ ಸಂಘ ಆಹ್ವಾನಿಸುತ್ತದೆ.

**ಅಧ್ಯಕ್ಷರು ಹಾಗೂ**
**ಕಾರ್ಯಕಾರಿ ಸಮಿತಿ**

# ಮಾನಸ ಪೂಜಾ



ಪೂಜೆ ಎಂದರೆ ದೇವರ ಮನೆಯಲ್ಲಿ ಕುಳಿತು ಪೂಜಾ ಸಾಮಗ್ರಿಗಳೊಂದಿಗೆ ದೇವರ ಮೂರ್ತಿಯನ್ನು ಪೂಜಿಸುವುದು ಮಾತ್ರ ಪೂಜೆಯಲ್ಲ, ಕಾಯ, ವಾಚ, ಮಾನಸದ ಮೂಲಕ ಮಾಡುವ ಪ್ರತೀ ಕಾರ್ಯವೂ ಪೂಜೆ ಆಗಬೇಕು. ಹೇಗೆಂದರೆ ಶರೀರದಿಂದ ಮಾಡುವ ಪ್ರತೀ ಕೆಲಸ, ವಾಕ್ ಮೂಲಕ ಬರುವ ಪ್ರತೀ ಶಬ್ದ ಮತ್ತು ಮುಖ್ಯವಾಗಿ, ಪ್ರಥಮವಾಗಿ ಮನಸ್ಸಿನಲ್ಲಿ ಮೂಡುವ ಪ್ರತೀ ಸಂಕಲ್ಪವೂ ನಿಷ್ಕಲ್ಮಶವಾಗಿದ್ದಾಗ ಅದು ಪೂಜೆ ಎನಿಸುತ್ತದೆ.

ಮಾನವ ಜೀವಿಯು ಕರ್ಮಪ್ರದವಾದ ಈ ಭೂಮಿಯಲ್ಲಿ ಸುಖ, ಶಾಂತಿ, ಆನಂದ, ನೆಮ್ಮದಿಗಾಗೇ ಎಲ್ಲಾ ಕರ್ಮವನ್ನು ಮಾಡುವುದು. ಕೇವಲ ದೇವತಾ ಪೂಜೆ ಎಂಬ ಕಾರ್ಯದಿಂದ ಇದು ದೊರಕುವುದೇ ಆದರೆ ಎಲ್ಲರೂ ಪೂಜೆಯನ್ನು ಬಿಟ್ಟು ಬೇರೆ ಯಾವ ಕಾರ್ಯವನ್ನೂ ಮಾಡುತ್ತಿರಲಿಲ್ಲ. ಪೂಜೆಯೆಂಬುದು ಮನೆಗಳಲ್ಲಿ, ದೇವಾಲಯ, ಮಠ ಮಂದಿರಗಳಲ್ಲಿ ಬೆಳಗಿನಲ್ಲಿ ಸಂಜೆಯಲ್ಲಿ ಮಾತ್ರ ನಡೆಯುವಂತಹುದು. ಇಂತಹ ಸ್ಥಳಗಳಲ್ಲಿ, ಇಂತಹ ಸಮಯದಲ್ಲಿ ಮಾತ್ರ ನೆಮ್ಮದಿ ಸಿಗುವಂತಾದರೆ ಅದು ಅವಲಂಬನೆ ಆಗುತ್ತದೆ. ಇನ್ನಿತರ ಸ್ಥಳಗಳಲ್ಲಿ, ಉಳಿದ ಸಮಯದಲ್ಲಿ ಅಸಂತೋಷ, ತೊಳಲಾಟಗಳೇ ಗತಿ ಆಗುತ್ತದೆ. ಪೂಜೆ ಮಾಡದವರು ನೆಮ್ಮದಿಯಿಂದ ವಂಚಿತರಾಗುತ್ತಾರೆ. ಭಗವಂತನ ದೃಷ್ಟಿಯಲ್ಲಿ ಯಾರೂ ವಂಚಿತರಾಗುವಂತೇ ಇಲ್ಲ, ವಂಚಿತರಾಗುವುದೂ ಇಲ್ಲ. ಆದ್ದರಿಂದ ಅಸಹಾಯಕರಿಗೆ, ಮುಗ್ಧರಿಗೆ ಮತ್ತು ಪೂಜಾ ಕಾರ್ಯವಿಧಾನವನ್ನು ಅರಿಯದವರಿಗೆ ಪೂಜಾ ವಿಧಾನದ ಸುಲಭ ಮಾರ್ಗವನ್ನು ಆದಿಗುರುಗಳಾದ ಶ್ರೀ ಶಂಕರಭಗವತ್ಪಾದರು ತಮ್ಮ ಪ್ರಕರಣ ಶ್ಲೋಕಗಳಲ್ಲೊಂದಾದ 'ಶಿವಮಾನಸ ಪೂಜೆ'ಯ ಐದು ಶ್ಲೋಕಗಳಲ್ಲಿ ತಿಳಿಸಿದ್ದಾರೆ.

'ಶರೀರ ಮಾಧ್ಯಮಂ ಖಲು ಧರ್ಮ ಸಾಧನಂ' ಎನ್ನುವಂತೆ ಭಗವಂತ ನಮಗೆ ಕರುಣಿಸಿರುವ ಅತ್ಯಂತ ಶ್ರೇಷ್ಠವಾದ ಮಾನವ ಶರೀರ ಮಾತ್ರದಿಂದಲೇ ಬೇರೆ ಯಾವುದೆ ಸಾಧನಗಳನ್ನು (ಪೂಜಾ ಸಾಮಗ್ರಿ) ಉಪಯೋಗಿಸದೇ ಸದಾ ಮಾನಸಿಕವಾಗಿಯೇ ಶ್ರಮವಿಲ್ಲದೆ, ಆಡಂಬರವಿಲ್ಲದೆ ಆನಂದವಾಗಿ ಶ್ರದ್ಧೆಯಿಂದ ಪರಮಾತ್ಮನನ್ನು ಪೂಜಿಸ ಬಹುದು. ಈ ಪೂಜೆಯನ್ನು ಲಿಂಗಭೇದವಿಲ್ಲದೆ, ನಿಗದಿತ ಸಮಯ ಮಿತಿ ಇಲ್ಲದೆ ಆಬಾಲ ವೃದ್ಧರು, ಅನಾರೋಗ್ಯದಿಂದ ಅಸಹಾಯಕರಾಗಿರುವವರು, ಅಶಕ್ತರು ಕೂಡ ಮಾಡಬಹುದು. ಜೀವನದಲ್ಲಿ ಮೊದಲಿನಿಂದ ಪ್ರತಿನಿತ್ಯ ಪೂಜಾಕಾರ್ಯವನ್ನು ಅನೂಚಾನವಾಗಿ ಮಾಡಿ ಅಭ್ಯಾಸವಿದ್ದು ಸಧ್ಯದಲ್ಲಿ ಮಾಡಲಾಗುತ್ತಿಲ್ಲದವರು ಈ ಕ್ರಮ ಅನುಸರಿಸುವುದು ಉಚಿತ. ಇನ್ನಿತರರು ಈ ಕಾರ್ಯದಿಂದ ಬೇರೆ ಯಾವುದೇ ಕಾರಣದಿಂದ (ಸಮಯ ಅಭಾವ, ಸೋಮಾರಿತನ, ಅರೆ ಜ್ಞಾನ) ತಪ್ಪಿಸಿಕೊಳ್ಳಲು ಪ್ರಯತ್ನಿಸುವುದು ಸರಿಯೆನಿಸುವುದಿಲ್ಲ. ಏಕೆಂದರೆ ಆದಿಗುರುಗಳೇ 'ಚಿತ್ತಸ್ಯಶುದ್ಧಯೇ ಕರ್ಮಸು' ಎಂದು ಹೇಳಿರುವಂತೆ, ಚಿತ್ತಶುದ್ಧಿಗಾಗೇ ಸಕಲ ಕರ್ಮಗಳು (ಪೂಜೆಯನ್ನೊಳಗೊಂಡು) ನಡೆಯುತ್ತಿರುವುದು. ಚಿತ್ತಶುದ್ಧಿಯಿಂದಲೇ ನಿರುದ್ವಿಗ್ನ ಮನಸ್ಸು ಮತ್ತು ನಿಶ್ಚಯಾತ್ಮಕ ಬುದ್ಧಿ ದೊರಕುವುದು.

ಈ ಶರೀರವೇ ಒಂದು ದೇವಾಲಯ, ಗರ್ಭಗುಡಿಯ ಮೂರ್ತಿಯು ನಮ್ಮಲ್ಲಿರುವ ವಿಶುದ್ಧ ಚೈತನ್ಯ. ಪಂಚಜ್ಞಾನೇಂದ್ರಿಯ, ಪಂಚ ಕರ್ಮೇಂದ್ರಿಯ, ಪಂಚತನ್ಮಾತ್ರ, ಪಂಚಪ್ರಾಣ ಮತ್ತು ಅಂತಃಕರಣದಲ್ಲಾಗುವ ಕ್ರಿಯೆಗಳು ಭಗವಂತನಿಗಾಗುವ ಷೋಡಶೋಪಚಾರಗಳಾಗುತ್ತವೆ. ಮನಸ್ಸಿಗೆ ಬರುವ ಪ್ರತೀ ಆಲೋಚನೆ ನಮಗೂ ಮತ್ತು ಇನ್ನಿತರರಿಗೂ ಉಪದ್ರವ ಆಗಬಾರದು. ನಾವಾಡುವ ಪ್ರತೀ ಮಾತು ಸ್ತೋತ್ರದಂತಿರಬೇಕು. ಇದನ್ನು ತಿಳಿದಾಗ ಚುಚ್ಚು ನುಡಿ, ವ್ಯಂಗ್ಯ, ಅಪಹಾಸ್ಯಗಳಿಗೆ ಅವಕಾಶ ಇರುವುದಿಲ್ಲ. ಆಗ ನಮ್ಮಿಂದ ಯಾವುದೇ ದೋಷಗಳಾಗುವುದಿಲ್ಲ. ಅವುಗಳನ್ನು ತಡೆಯಬಹುದು.

ಇದಕ್ಕೆ ಪೂರಕವಾಗಿ ದಾಸ ಶ್ರೇಷ್ಠರಾದ ಶ್ರೀ ಪುರಂದರದಾಸರು ತಮ್ಮ ದೇವರ ನಾಮದಲ್ಲಿ ನಮಗೆ ಅರ್ಥವಾಗುವ ಸರಳ ಕಸ್ತೂರಿ ಕನ್ನಡದಲ್ಲಿ ಪೂಜೆಯ ಸುಲಭ ವಿಧಾನವನ್ನು ಹೇಳಿದ್ದಾರೆ. ಸುಲಭದ ಪೂಜೆಯ ಮಾಡಿ ಬಲ್ಲವಿಲ್ಲದವರು.

ಈ ರೀತಿಯಿಂದ ನಡೆದುಕೊಂಡ ನಮ್ಮ ಋಷಿಮುನಿಗಳು, ಸಾಧು ಸಂತರು, ದಾಸರು, ಭಕ್ತವರೇಣ್ಯರು ಭಗವಂತನ ಅನುಗ್ರಹಕ್ಕೆ ಪಾತ್ರರಾಗಿ ತಮ್ಮ ಜೀವಿತ ಕಾಲದಲ್ಲೇ ಜೀವನ್ಮುಕ್ತರಾಗಿದ್ದರು. ಇದನ್ನು ನಾವೂ ಶ್ರದ್ಧೆಯಿಂದ ಅನುಸರಿಸಿದರೆ ಖಂಡಿತವಾಗಿ ಶಾಂತಿ, ಸಮಾಧಾನದಿಂದ ಇರಬಹುದು. ಇದು ಅಸಾಧ್ಯವಲ್ಲ, ಆದರೆ ಕಷ್ಟಸಾಧ್ಯ. ಪ್ರಯತ್ನ ನಮ್ಮಗಳ ಕೈಯ್ಯಲ್ಲಿದೆ.



*–ರಾ. ರಮೇಶ್*
*9886034048*

## ಧನುರ್ಮಾಸದ ವಿಶೇಷ

ಪ್ರತ್ಯಕ್ಷ ದೇವರಾದ ಭಗವಾನ್ ಸೂರ್ಯನು, ವೃಶ್ಚಿಕ ರಾಶಿಯನ್ನು ಬಿಟ್ಟು, ಧನಸ್ಸು ರಾಶಿಯನ್ನು ಪ್ರವೇಶಿಸುವ ಮಾಸವೇ "ಧನುರ್ಮಾಸ", ಇದು ಒಂದು ತಿಂಗಳಕಾಲ ಆಚರಣೆಯಲ್ಲಿರುತ್ತದೆ. ಶ್ರೀ ಮಹಾವಿಷ್ಣುವಿಗೆ ಅತ್ಯಂತ ಪ್ರಿಯವಾದ ಮಾಸವಾದುದರಿಂದ, ಈ ಮಾಸಕ್ಕೆ ವಿಶೇಷ ಪ್ರಾಮುಖ್ಯತೆ ಇದೆ. ವಿಷ್ಣುವಿನ ಪ್ರಿಯಭಕ್ತೆಯಾದ ಗೋದಾದೇವಿಯು ತನ್ನ ಭಕ್ತಿ ಪುಷ್ಪ ಮಾಲಿಕೆಯನ್ನು ಶ್ಲೋಕ ಅಥವಾ ಪಾಶುರದ ಮೂಲಕ ದೇವರಿಗೆ ಅರ್ಪಿಸಿ, ವಿಷ್ಣುವಿನ ಪ್ರೀತಿಗೆ ಪಾತ್ರಳಾಗಿ ಅಂತ್ಯದಲ್ಲಿ ಆತನನ್ನೇ ಪತಿಯಾಗಿ ಸ್ವೀಕರಿಸಿದ ಮಾಸ. ಹಾಗಾಗಿ ಆ ಶ್ಲೋಕಗಳನ್ನು 'ತಿರುಪ್ಪಾವೈ' ಎಂದು ಕರೆದಿದ್ದಾರೆ. ಇದರಲ್ಲಿ 30 ಶ್ಲೋಕಗಳಿದ್ದು, ಪ್ರತಿಯೊಂದರಲ್ಲೂ ಗೋದಾದೇವಿಯು ವಿಷ್ಣುವನ್ನು ನಾನಾ ರೀತಿಯಲ್ಲಿ ಸ್ತುತಿಸಿ, ಭಜಿಸಿ, ಕೊಂಡಾಡಿ, ತಾನೇ ಗೋಪಿಕೆಯರಲ್ಲಿ ಒಬ್ಬಳಾಗಿ, ಕೊನೆಗೆ ತನ್ನನ್ನೇ ದೇವರಿಗೆ ಸಮರ್ಪಿಸಿಕೊಂಡ ವಿಶೇಷ ಮಾಸ. ಅಲಂಕಾರ ಪ್ರಿಯನಾದ ವಿಷ್ಣುವಿಗೆ ಸೂರ್ಯೋದಯಕ್ಕೆ ಮೊದಲೇ ಸಹಸ್ರನಾಮದಿಂದ ಅರ್ಚನೆ ಮಾಡಿ ಬೆಲ್ಲ, ಅಕ್ಕಿ, ಹೆಸರುಬೇಳೆಗಳನ್ನು ಬೆರೆಸಿ, ನೈವೇದ್ಯವನ್ನು ಮಾಡುತ್ತಾರೆ. ಆ ಧನುರ್ಮಾಸದ ವ್ರತವನ್ನು ಅಗಸ್ತ್ಯ ಮಹರ್ಷಿ, ವಿಶ್ವಾಮಿತ್ರ, ಗೌತಮ ಮಹರ್ಷಿ, ಭೃಗು ಮುನಿಗಳು ಹಾಗೂ ಇನ್ನೂ ಅನೇಕರು ಆಚರಿಸಿದ್ದಾಗಿ ಪುರಾಣದಲ್ಲಿ ತಿಳಿಸಿದೆ.

**ಭ್ರಮರಾಂಬ ಗೋಪಿನಾಥ್**

# ಮಧುರ ಭಾಷೆ

ಯಾರು ಯಾವ ಭಾಷೆಯನು ನುಡಿದರೂ
ಆಡುವುದು ಮಧುರ ಭಾಷೆಯಾದರೆ ಅದು ಇಂಪು ದೇವಸ್ತುತಿ ।

ಯಾವ ತಂತ್ರ ಮಂತ್ರ ಜ್ಞಾನ ಆ ಭಾಷೆಗೆ ಬೇಕಿಲ್ಲ
ವಚನಾಮೃತ ಕೇಳುವ ಆಸೆಯೂ ಇರಬೇಕಿಲ್ಲ
ಆಧ್ಯಾತ್ಮ ಬದುಕಿನಿಂದ ದೂರ ಸರಿದರೂ ತೊಂದರೆ ಇಲ್ಲ
ಗ್ರಂಥ ಪಠಣಮಾಡಿ ಪುಣ್ಯದ ಆಸೆ ಇಲ್ಲವಾದರೂ ಸರಿ
ಆಡುವುದು ಮಧುರ ಭಾಷೆಯಾದರೆ ಅದು ಇಂಪು ದೇವಸ್ತುತಿ ।


ಮೌನಗಾನವ ಹಾಡಲು ತಪ್ಪು ತಾಳ ಹಾಕಿದರೂ ಸರಿ
ಕೋಗಿಲೆ ಹಾಡನ್ನು ಕೇಳದೆ ಕಂಗಾಲಾದರೂ ಸರಿ
ಸತ್ಸಂಗ ಪ್ರೇಮವನ್ನು ಅನುಭವಿಸಲು ಆಗದಿದ್ದರೂ ಸರಿ
ಶಬ್ದ ತರಂಗಗಳನ್ನು ಆಲಿಸಿ ಮುಂದೆ ಮರೆತರೂ ಸರಿ
ಆಡುವುದು ಮಧುರ ಭಾಷೆಯಾದರೆ ಅದು ಇಂಪು ದೇವಸ್ತುತಿ

ಭಕ್ತಿ ಕರ್ಮ ಸಾಧಕರ ಮತ್ತು ಸಾಧುಗಳ ಆಶೀರ್ವಾದ ಇಲ್ಲದಿದ್ದರೂ
ದಿವ್ಯ ರತ್ನಾಭರಣ ಹೊಂದಲು ಆಶೆ ನಿರಾಶೆಯಾದರೂ
ತತ್ವನಿಧಿಯ ಪರಿಪೂರ್ಣ ಜ್ಞಾನ ಇಲ್ಲದಿದ್ದರೂ
ಪೂಜೆ ವ್ರತಗಳ ಸಮೀಕ್ಷೆಗೆ ಸಮಯ ಸಾಲದಿದ್ದರೂ
ಆಡುವುದು ಮಧುರ ಭಾಷೆಯಾದರೆ ಅದು ಇಂಪು ದೇವಸ್ತುತಿ ।

ಸಂಸಾರ ಸುಖದುಃಖಗಳಲ್ಲಿ ಮುಳುಗಿದ್ದರೂ
ಜೀವನವೇ ಬರುಡೆಂದು ಕಾಯುತ್ತಿದ್ದರೂ
ಆಸೆ ನಿರಾಶೆ ನದಿಯಲ್ಲಿ ಮುಳುಗದೆ ತೇಲುತ್ತಿದ್ದರೂ
ಎಲ್ಲರಿಗೂ ಸುಖ ಸಿಗಲೆಂದು ಆಶಿಸಲಾಗದಿದ್ದರೂ
ಆಡುವುದು ಮಧುರ ಭಾಷೆಯಾದರೆ ಅದು ಇಂಪು ದೇವಸ್ತುತಿ ।

■ ಎಂ.ಪಿ. ರಂಗನಾಥನ್
94808 61849






– ಎಂ.ಎಸ್. ವಿಜಯಲಕ್ಷ್ಮಿ
9886921505

# ಹರಟೆ ಎಬಿಸಿಡಿ

**A** ನಮ್ಮಾ ಚೆನ್ನಾಗಿದ್ದಿಯಾ? ಎಲ್ಲಿಗೆ ಹೊರಟೆ?

**B** ಸೋಕೆ ಹೋಗ್ತಿದ್ದೀನಮ್ಮಾ (ಅಆಅಆ... ಷೀ..)

**C** ನೋಕೆ ಶುರುಮಾಡ್ಬಿಟೀ, ನೆಗಡಿನಾ ಏನು ತಂದೆ?

**D** ಗ್ರೇಡ್ ಬೇಳೆ ಸಾಂಬಾರ್ ತಿಂದೆ ಅದಕ್ಕೆ ಈ ವಿಪರೀತ

**E-F** ಅನ್ನೋ ನೆಗಡಿ ಮಾತ್ರೆ ತಗೋಬಾರ್ದಾ?

**G** ರಿಗೆ ಕಶಾಯ ಮಾಡಿ ಕುಡೀತಿನಿ ಬಿಡ್ತಿ

**H** ಕಷ್ಟ ಏಕೆ ನಿಮಗೆ ನಮ್ಮನೆಗೆ ಬನ್ರೀ!!

**J** ಕೋ ಅಷ್ಟಕೆ ಕೆಲಸ ಇದೆ–ನಾ ಹೋಗ್ತೀನಮ್ಮಾ

**K** ಲಸ ಕೆಲಸ ಅಂತಾ ಯಾವಾಗ್ಲೂ ಹಾರಾಡ್ತೀರಲ್ಲಾ

**L** ರೂ ನಿಮ್ಮಂಗೆ ಬಿಡುವಾಗಿರ್ತಾರೇನಮ್ಮಾ

**M** ಮ್ಮೆಗಳು ಮನೆಗೆ ಬರ್ತಾವೆ ಅವನ್ನೆಲ್ಲಾ ಕೊಟ್ಟಿಗೆಗೆ ಕಟ್ಟಬೇಕು.

**N** ಟು ಎಮ್ಮೆ ಇವೇರಿ ಒಂದಲ್ಲಾ ಎರಡಲ್ಲಾ ಎಲ್ಲಾ ನಾನೇ ಮಾಡ್ಬೇಕು

**O** ಪೀಸ್‌ನಿಂದ ನಿಮ್ಮವರು ಇನ್ನೂ ಬಂದಿಲ್ಲೇನ್ರಿ ಪಾಪ ನಿಮಗೂ ಕಷ್ಟ ಏನ್ಮಾಡೋದು?

**P** ಸ್ ವರ್ಕ್ ಬೇರೆ ಇದೇರಿ ಡಿಪೋಗೆ ಹೋಗಿ

**Q** ಬೇರೆ ನಿಂತ್ಕೋ ಬೇಕು.

**R** ಗಂಟೆಗೆ ನಿಮ್ಮಗ ಆಫೀಸ್‌ನಿಂದ ಬರ್ತಾನಪ್ಪ

**S** ರೇನಂದ್ರಿ ನಿಮ್ಮಗಳದ್ದು?

**T** ಸುಮಿತ್ರ ಅಂತ ಸುಮಾರ ಅಂತಾನೇ ನಾವೆಲ್ಲ ಕರಿಯೋದು

**U** ನಿವರ್ಸಿಟಿಯಲ್ಲಿ ಓದ್ತಾ ಇದ್ದಾಳೆ ಮನೆಗೆ ಇನ್ನೂ ಬಂದಿಲ್ಲ ಹಾಳಾದೋಳು.

**V** ೞರಿ ಮಾಡ್ಕೊಬೇಡಿ ನೀವು ರೆಸ್ಟ್ ತಗೊಳ್ಳಿ, ಮಗಳು ಕಾಫಿ ಮಾಡ್ಕೊಡ್ತಾಳೆ ಕುಡಿದು ಬೆಚ್ಚಗೆ

**W-W** ಅಂತ ಅವಳೇನೂ ಇಂಗ್ಲೀಷ್‌ನಾಗೆ ಬೈಕೋತಾಳೆರೀ

**X** ಲೇಟಾಗಿ ಇರ್ತಾ ಇದ್ದೆ.

**Y** ಲಿನ್ ಕಲಿಯೋಣಾಂತ್ತಿದ್ದೇರೀ ಆದರೆ ಅದರ ತಂತಿ

**Z** ಅಂತ ಕಿತ್ತೋಯ್ತಲ್ರೀ



ಶ್ರೀಮತಿ ಪದ್ಮಜಾ
ಶಾವಕನಪಲ್ಲಿ, 23608131

## ಅಭಿನಂದನೆ

ಸಂಘದ ಸದಸ್ಯ ಶ್ರೀ ಆರ್. ಶ್ರೀನಿವಾಸ್, (ಸಂಗೀತ ವಿದುಷಿ ಶ್ರೀಮತಿ ರಂಜಿನಿ ವೆಂಕಟೇಶ್‌ರವರ ಮಾವನವರು) ರವರಿಗೆ 70 ವರ್ಷ ತುಂಬಿದ ಈ ಶುಭ ಸಂದರ್ಭದಲ್ಲಿ ಸಂಘವು ಶುಭ ಹಾರೈಸುತ್ತದೆ.

# ತಿತಿಕ್ಷ! (ENDURANCE)



ಆದಿ ಶಂಕರಾಚಾರ್ಯರು ತತ್ತ್ವಬೋಧದಲ್ಲಿ ತಿತಿಕ್ಷ ಎಂದರೆ ಶೀತೋಷ್ಣ, ಸುಖದುಃಖಗಳಲ್ಲಿ ಸಹಿಷ್ಣುತೆ ಎಂದು ಸೂತ್ರ ರೀತಿಯಲ್ಲಿ (definition) ಹೇಳಿರುತ್ತಾರೆ. ತಿತಿಕ್ಷ ಆರು ಸಂಪತ್ತುಗಳಲ್ಲಿ ಒಂದು; ಮತ್ತು, ತತ್ತ್ವ ವಿವೇಚನೆಗೆ ಬಹಳ ಮುಖ್ಯ ಎಂದೂ ಪರಿಗಣಿಸಲಾಗಿದೆ. (ಆರು/ಷಟ್ ಸಂಪತ್ತಿ– ಶಮ, ದಮ, ಉಪರತಿ, ತಿತಿಕ್ಷ, ಶ್ರದ್ಧ, ಮತ್ತು ಸಮಾಧಾನ.)

ಆದರೆ ಇದು ನಮಗೆ ಸಾಧ್ಯವೇ? ನಾವೆಲ್ಲಾ ಚಿಕ್ಕಂದಿನಿಂದಲೂ 'ಶೆಕೆ ಶೆಕೆ' ಎಂದು ಫ್ಯಾನ್ ಹಾಕುವವರು ಅಥವಾ ಸಣ್ಣ ಮಳೆಯಾದ ಕೂಡಲೇ ಸ್ವೆಟರ್, ಜ್ಯಾಕೆಟ್ ಧರಿಸುವವರು. ನಮ್ಮೆಲ್ಲರ ಮನೆಗಳಲ್ಲೂ ಹಿರಿಯರು ನಮಗೆ ಎಷ್ಟೋ ಬಾರಿ ಉಪದೇಶ ಮಾಡಿದ್ದಾರೆ–ತಕ್ಷಣ ಫ್ಯಾನ್ ಹಾಕಬೇಡಿ, ಫ್ರಿಡ್ಜ್ ನೀರು, ಬಿಸಿಲಿನಿಂದ ಬಂದ ಕೂಡಲೇ ಕುಡಿಯಬೇಡಿ, ಎಂದು. ಆದರೆ ನಾವುಗಳು ಅವುಗಳಿಗೆ ಹೆಚ್ಚು ಗಮನ ಕೊಡುವುದಿಲ್ಲ.

ನಮಗೆ ಜೀವನದ ಉದ್ದಕ್ಕೂ ಸತತವಾಗಿ, ದೈಹಿಕವಾಗಿ – ಶೀತ/ಉಷ್ಣ, ಮಾನಸಿಕವಾಗಿ–ಸುಖ/ದುಃಖ, ಬೌದ್ಧಿಕವಾಗಿ–ಹೊಗಳಿಕೆ/ತೆಗಳಿಕೆ ಸಿಕ್ಕುತ್ತಲೇ ಇರುತ್ತದೆ. ಚಿಕ್ಕ ಚಿಕ್ಕ ಅನಾನುಕೂಲಗಳಾದರೂ ಸಹ ನಾವು ಸುತ್ತಲೂ ಇರುವವರನ್ನು, ಕೆಲವರು ದೇವರನ್ನು, ಇನ್ನೂ ಕೆಲವರು ಸರ್ಕಾರವನ್ನು ಬಯ್ಯುತ್ತಿರುತ್ತೇವೆ.

ಆದರೆ, ನಮ್ಮ ದೇಶದ ಮಿಲಿಟರಿಯವರು ಹೇಗೆ ಅವರ ಮನಸ್ಸನ್ನು ಅಷ್ಟು ಉನ್ನತ ವಿಚಾರಗಳಿಂದ, ಹಾಗೂ ಏಕಾಗ್ರತೆಯಿಂದ ದೇಶಕ್ಕೋಸ್ಕರ ಪ್ರಾಣವನ್ನು ಕೊಡಲು ಸಿದ್ಧರಿರುತ್ತಾರೆ? ಅವರಿಗೂ ನಮ್ಮ ತರಹ ದೈಹಿಕ ನೋವುಗಳಿದ್ದರೂ ಸಹ, ತರಬೇತಿಯಿಂದ ಈ ಸ್ಥಿತಿಗೆ ತಲುಪಲು ಎಷ್ಟು ಸಹಿಷ್ಣುತೆ ಇದ್ದಿರಬಹುದು? ಕ್ರಿಕೆಟ್ ಮತ್ತು ಟೆನ್ನಿಸ್ ಆಟಗಾರರನ್ನು ನಾವು ಪಂದ್ಯಾವಳಿಯಲ್ಲಿ ನೋಡುತ್ತಿರುತ್ತೇವೆ. ಅವರು ಬಿದ್ದಾಗ ಆಗುವ ತರಚು ಗಾಯಗಳನ್ನು ಉಪೇಕ್ಷೆ ಮಾಡುತ್ತಾರೆ. ಏನಾದರೂ ಬಲವಾದ ಪೆಟ್ಟು ಬಿದ್ದರೂ ಟ್ರೇನರ್ ಬಂದು ಅವರಿಗೆ ಮುಲಾಮು ಹಚ್ಚಿ, ಮಾಲೀಶು ಮಾಡಿದ ಕೂಡಲೇ, ಸ್ವಲ್ಪ ಥರಾಯಿಸಿ ಎದ್ದು, ನಂತರ ಆಟ ಶುರು ಮಾಡುತ್ತಾರೆ. ತಾತ್ಕಾಲಿಕವಾಗಿ, ಅವರು ನೋವನ್ನು ಮರೆಯುತ್ತಾರೆ. ಹಾಗಿದ್ದ ಪಕ್ಷದಲ್ಲಿ, ಎಲ್ಲರ ದೇಹವು ಪಂಚಭೌತಿಕವಾದ್ದರಿಂದ, ಎಲ್ಲರಿಗೂ ಸಾಧ್ಯ ಅಲ್ಲವೇ? (ತೀರಾ ಚಿಕ್ಕ ಮಕ್ಕಳು, ವೃದ್ಧರು ಮತ್ತು ಖಾಯಿಲೆಯವರ ಹೊರತಾಗಿ.)

ಶ್ರೀಮದ್ ಭಗವದ್ಗೀತೆಯಲ್ಲಿಯೂ ಸಹ ತಿತಿಕ್ಷದ ಬಗ್ಗೆ ಉಲ್ಲೇಖವಿದೆ. ಈ ಶೀತೋಷ್ಣ, ಸುಖದುಃಖಗಳು ಅನಿತ್ಯವಾದ್ದರಿಂದ (ಬಂದು –ಹೋಗುವಂತಹವು) ಅವುಗಳ ವಿಷಯದಲ್ಲಿ ತಿತಿಕ್ಷ ಇರಲಿ ಎಂದು ಭಗವಾನ್ ಸ್ಪಷ್ಟವಾಗಿ ಹೇಳಿದ್ದಾನೆ. ಮತ್ತು, ಇವುಗಳ ಬಗ್ಗೆ ಸಮಭಾವದಿಂದ ವರ್ತಿಸುವುದರಿಂದ ಅಮೃತತ್ವಕ್ಕೆ ಅರ್ಹತೆ ಬರುವುದು ಎಂದೂ ಹೇಳಿದ್ದಾನೆ. (ಅಧ್ಯಾಯ ೨, ಶ್ಲೋಕ ೧೪–೧೫)

ತಿತಿಕ್ಷ ಎಂದರೆ, ಗಾಡಿಗೆ (vehicle) ಶಾಕ್–ಅಬ್ಸಾರ್ಬರ್ ಇದ್ದಂತೆ. ಒಂದೊಂದು ಹಂಪ್/ಹಳ್ಳ–ದಿಣ್ಣೆ ಬಂದಾಗಲೂ, ಗಾಡಿ ಸುಗಮವಾಗಿ ಮುಂದೆ ಸಾಗಲು ಸಹಾಯವಾಗುತ್ತದೆ. ನಾವು ಯಾವಾಗಲೂ ಗೊಣಗಾಡುತ್ತಿದ್ದರೆ, ನಮ್ಮ ಮನಸ್ಸು ಸೂಕ್ಷ್ಮ ವಿಷಯಗಳನ್ನು ಗ್ರಹಿಸುವುದಿಲ್ಲ. ಮತ್ತು ಬಹಳ ಮುಖ್ಯವಾದ ವಿಷಯವೆಂದರೆ ನಾವು, ಧನ್ಯತಾ ಭಾವವನ್ನು (Sense of gratitude) ಕಳೆದುಕೊಳ್ಳುತ್ತೇವೆ. ಹೀಗಾಗಿ, ಏನನ್ನಾದರೂ ಸಾಧಿಸಲು, ತಿತಿಕ್ಷ, ಸ್ವಲ್ಪ ಮಟ್ಟಿಗಾದರೂ ಅಭ್ಯಾಸ ಮಾಡಲೇಬೇಕು ಎಂದು ಸಿದ್ಧವಾಗಿದೆ.



– ಮೀರಾ ಕೃಷ್ಣಮೂರ್ತಿ
97402 93012


## ವಾರ್ತಾಚಿತ್ರ





ಶ್ರೀ ಶ್ರೀನಿವಾಸ ಕಲ್ಯಾಣೋತ್ಸವದಲ್ಲಿ ಪ್ರಸಾದ ಸ್ವೀಕರಿಸುತ್ತಿರುವ ಬೃಹಚ್ಚರಣ ಬಂಧುಗಳು



ಶ್ರೀಮತಿ ಪದ್ಮಿನಿ ಅಶ್ವಥ್



## ಪದಬಂಧ–3

| | | | | | | |
|---|---|---|---|---|---|---|
| 1 | | 9 | ■ | 2 | | 10 |
| | ■ | | ■ | | ■ | |
| ■ | ■ | 3 | 11 | | ■ | ■ |
| 4 | | ■ | | ■ | 5 | 13 |
| | ■ | 6 | | 12 | ■ | |
| 7 | | | ■ | 8 | | |
| ■ | ■ | | ■ | | ■ | ■ |

**ಎಡದಿಂದ ಬಲಕ್ಕೆ**

1. ಹಳತಲ್ಲದು (3)
2 ಕರದಲ್ಲಿ ಹಿಡಿಯದೇ, ತಲೆಯ ಮೇಲೆ ಹೊರುವ ಸಂಪ್ರದಾಯದ ಹಬ್ಬ (3)
3. ಹಳೆಗನ್ನಡದ ಪದ್ಯಗಳನ್ನು ಗಾಯನ – ವಾಚನ ಮಾಡುವ ಅಪರೂಪದ ಕಲೆ (3)
4. ಇದು ಅಕ್ಷಿಯಲ್ಲ ಹಕ್ಕಿ (2)
5. ದನ ಸಿಕ್ಕಿದ್ದನ್ನೆಲ್ಲ ಕೊಟ್ಟುಬಿಟ್ಟಿತೆ!! (2)
6. ಆನನವಲ್ಲ, ಕಾಡು (3)
7. ಖುಷಿಯಿಂದಿರುವಾಗ ಬಿದ್ದುಹೋಯಿತೆ? (3)
8. ಗಾಯ ಮಾಡಿಕೊಂಡವನ ಹಾಡುಗಾರಿಕೆ (3)

**ಮೇಲಿನಿಂದ ಕೆಳಗೆ**

1. ಫಳಫಳನೆಂದು ಹರಿಯುತ್ತಿದೆ ನೀರು (2)
2. ಕೃಷ್ಣನನ್ನೇ ತಿರುಗಿಸಿದನೇ ಬಂಗಾರದಂಥ ಭಕ್ತ (3)
3. ಪರರನ್ನು ಹೊಗಳುವ ಮಾತು (3)
4 ತರ ತರದ ಕುತೂಹಲ (3)
5. ತುರಕನೇರಿದ ಕುದುರೆ (3)
6. ಗತಿ ಇಲ್ಲದೇ ಕಳೆದು ಹೋದದ್ದು (2)
7. ದನ ಕಾಯುವವನಲ್ಲ ಮನ್ಮಥ (3)
8. ನಗರದಲ್ಲಿ ನುಡಿದ ವಾದ್ಯ (3)
9. ನಯವಾದ ಕಣ್ಣುಗಳು (3)



ಎನ್. ಶುಭ ಗಾಯತ್ರಿ

# ರಾಮಾಯಣದ ರಾಮಚಂದ್ರರಾಯರು



ನಾಗೇಶ್ವರ ಕ್ಷೇತ್ರದ ಶಾಶ್ವತ ಸೇವಾ ಕರ್ತರಾಗಿದ್ದ ಶ್ರೀ ರಾಮಚಂದ್ರ ರಾಯರು ನಮ್ಮ ತಾತ. ಅವರು ವಿದ್ಯಾವಂತರು ಮತ್ತು ಬಹುಭಾಷಾ ಪಂಡಿತರು, ಕನ್ನಡ, ಸಂಸ್ಕೃತ, ತೆಲುಗು, ತಮಿಳು ಭಾಷೆಗಳನ್ನು ಬಲ್ಲವರಾಗಿದ್ದರು. ಇವರ ಮಕ್ಕಳಾದ ಶ್ರೀನಿವಾಸಮೂರ್ತಿ ಮತ್ತು ಕೃಷ್ಣಮೂರ್ತಿಗಳು ಸಮುದಾಯದ ಅಗ್ರಗಣ್ಯರು, ಕಿತ್ತಿಗಾನಹಳ್ಳಿಯ ವೇ॥ ಬ್ರ॥ ಶ್ರೀ॥ ಶಾಮಣ್ಣ ದೀಕ್ಷಿತರ ಆತ್ಮೀಯ ಸ್ನೇಹಿತರಾದ ಶ್ರೀಯುತರು ತಮ್ಮ ಕುಟುಂಬದ ಎಲ್ಲಾ ಕಾರ್ಯಕ್ರಮಗಳನ್ನು ದೀಕ್ಷಿತರ ಸಲಹೆಯಂತೆ ನಡೆಸುತ್ತಿದ್ದರು. ನಮ್ಮಣ್ಣ ಭಗವಾನ್ ಮದುವೆ ಕೂಡ 48 ವರ್ಷಗಳ ಹಿಂದೆ ಕ್ಷೇತ್ರದಲ್ಲಿ ನಿರ್ಣಯವಾಯಿತು. ರಾಮಚಂದ್ರರಾಯರ ಪತ್ನಿ ಅಟ್ಟೂರು ಅಮ್ಮಣ್ಣಮ್ಮನವರು. ಇವರ ಮೊಮ್ಮಕ್ಕಳು, ಮರಿಮಕ್ಕಳೂ ಕೂಡ ಇಂದು ಸಂಘದ ಸದಸ್ಯರಾಗಿದ್ದಾರೆ.

ಶ್ರೀಯುತರು ಅಂದಿನ ದಕ್ಷಿಣ ಭಾರತದ ಪ್ರಖ್ಯಾತ ವಾಗ್ಗೇಯ ಕಾರರಾದ, ತಂಜಾವೂರಿನಲ್ಲಿ ನೆಲೆಸಿದ್ದ ಪೂಜ್ಯ ಪೂ.ಚಿ. ಶ್ರೀನಿವಾಸ ಅಯ್ಯಂಗಾರರಲ್ಲಿ ಸಂಗೀತ ಅಭ್ಯಾಸ ಮಾಡಿ ಸಂಗೀತ–ಸಾಹಿತ್ಯಗಳಲ್ಲಿ ಆಸಕ್ತರಾಗಿದ್ದರು. ಬಹುಮುಖ ವ್ಯಕ್ತಿತ್ವ ಉಳ್ಳವರಾಗಿದ್ದ ತಾತನವರು ರಾಮಾಯಣ ಪಾರಾಯಣ ಮಾಡುವುದರಲ್ಲಿ ವಿಶೇಷ ಆಸಕ್ತಿ ಹೊಂದಿದ್ದರು. ಈ ಆಸಕ್ತಿಯು, ಮುಂದೆ ಒಂದು ಕೃತಿ ನಿರ್ಮಾಣಕ್ಕೆ ಪ್ರೇರಣೆಯಾಯಿತು. ಇವರಿಗೆ 'ಶ್ರೀಮದ್ ರಾಮಾಯಣ' ಪಾರಾಯಣದ ಮೂಲಮಂತ್ರದ ಉಪದೇಶವಾಗಿತ್ತು. ಇದರ ಜಪದ ಫಲವಾಗಿ 'ವಾಲ್ಮೀಕಿ ಹೃದಯ' ರಚನೆಯಾಯಿತು.

ಶ್ರೀಯುತರು ಚೆನ್ನಪಟ್ಟಣ ಹಾಗೂ ಬೆಂಗಳೂರಿನ ಕಂದಾಯ ಇಲಾಖೆಯ ತಹಶೀಲ್ದಾರ್ ಕಛೇರಿಯಲ್ಲಿ ಸೇವೆ ಸಲ್ಲಿಸಿದ್ದರು.

ಸಂಗೀತದ ಆಸಕ್ತಿ, ಗೀಳು ಎಷ್ಟಿತ್ತೆಂದರೆ, ಒಮ್ಮೆ ಕೊಳದಲ್ಲಿ ಸ್ನಾನ ಮಾಡಿ ಬರಲು ಹೋದವರು ಎರಡು ದಿನವಾದರೂ ಹಿಂತಿರುಗಲಿಲ್ಲ. ಕೇಳಿದಕ್ಕೇ "ಕೊಯಮತ್ತೂರಿನ ತಾಯಿ ಎಂಬುವರ ಸಂಗೀತ ಕಛೇರಿಗೆ ಹೋಗಿದ್ದೆ. ನಾನು ತಲುಪುವ ಮುಂಚೆಯೇ ಕಛೇರಿ ಮುಗಿದಿದ್ದು ಅವರು ವಾಸವಾಗಿದ್ದ ಸ್ಥಳ ಹುಡುಕಿ ಅವರಿಂದ ಹಾಡು ಹಾಡಿಸಿ ಕೇಳಿ ತೃಪ್ತಿಯಾಗಿ ಹಿಂತಿರುಗಿದ್ದೆ" ಎಂದು ಹೇಳಿದ್ದರಂತೆ.

'ವಾಲ್ಮೀಕಿ ಹೃದಯ' ಕೃತಿಯು ಎರಡು ವರ್ಷಗಳ ಸತತ ಪರಿಶ್ರಮದ ಫಲವಾಗಿದ್ದು, ಆತ್ಮೀಯ ಗೆಳೆಯ ಹೆಸರಾಂತ ಸಾಹಿತಿ ಸುಬೋಧ ರಾಮರಾಯರ ಮುದ್ರಣಾಲಯದಲ್ಲಿ 1955ರಲ್ಲಿ ಪ್ರಕಟಿಸಿ ಲೋಕಾರ್ಪಣೆ ಮಾಡಲಾಯಿತು. 43 ಅಧ್ಯಾಯಗಳಿರುವ ಅನುಭಾವಿಕ, ಆಧ್ಯಾತ್ಮಿಕ, ತಾರ್ಕಿಕ ಸಂಬಂಧಿಸಿದ ಶ್ಲೋಕಗಳನ್ನು ಆಯ್ದು–ಶೀರ್ಷಿಕೆ ಕೊಟ್ಟು, ಸರಳ ಭಾಷೆಯಲ್ಲಿ ವ್ಯಾಖ್ಯಾನವನ್ನು ಬರೆದಿರುವುದರಿಂದ ಸರಳತೆಯ ನೋಟ ಕಾಣಬಹುದು. ಇದು ಮನಸ್ಸಿಗೆ, ಹೃದಯಕ್ಕೆ ಹೃದಯದ ಭಾವಾನಂದಕ್ಕೆ ಕಾರಣವಾಗಿದೆ.


ನನ್ನ ತಾತ ಶ್ರೀ ರಾಮಚಂದ್ರರಾಯರು ರಾಜಾಪುರ ವಂಶದಲ್ಲೇ ಪ್ರಮುಖರೆಂದು ಪ್ರಸಿದ್ಧರಾಗಿದ್ದರು. ಅವರ ಜೀವನವೇ 'ಸುಸಂಸ್ಕೃತ ಆಧ್ಯಾತ್ಮಿಕ' ಸಂದೇಶವನ್ನು ನೀಡುತ್ತದೆ. ನನ್ನ ಅಕ್ಕ ಇಂದಿನ ಹೆಸರಾಂತ ಗೋಟುವಾದ್ಯ ವಾದಕಿ ಡಾ॥ ಗಾಯತ್ರಿದೇವಿ ಎಂದರೆ ಅವರಿಗೆ ಬಹಳ ಪ್ರೀತಿ. ಚಿಕ್ಕಂದಿನಲ್ಲೇ ಅವಳ ಸಂಗೀತಾಸಕ್ತಿ ಗುರುತಿಸಿ ಅದರ ಕುರುಹಾಗಿ ರಾಮನಾಮವುಳ್ಳ ಚಿನ್ನದ ಉಂಗುರ ಕೊಟ್ಟು ಆಶೀರ್ವದಿಸಿದ್ದರು. ಇಂತಹ ಪರಿವಾರದಲ್ಲಿ ನಾನು ಜನಿಸಿರುವುದೇ ಒಂದು ಪುಣ್ಯ ಎಂದು ಭಾವಿಸುತ್ತೇನೆ.




**ಪ್ರಕೃತಿ ಗುರುದತ್**

## ಚಿಣ್ಣರ ಅಂಗಳ

## ಬಣ್ಣ ತುಂಬಿ ಅಂದ ನೋಡಿ







# ಸುದ್ದಿ ಮನೆ

### ಕುಟುಂಬಕ್ಕೆ ಹೊಸ ಸೇರ್ಪಡೆ

ಸಂಘದ ಸದಸ್ಯೆ ಶ್ರೀಮತಿ ವಸುಮತಿ ಮತ್ತು ಶ್ರೀ ರವಿರವರ ಪುತ್ರ, ಸಂಘದ ಸದಸ್ಯ ಮೃದಂಗ ವಿದ್ವಾನ್ ಶ್ರೀ ಕಾರ್ತಿಕ ದಂಪತಿಗಳಿಗೆ ಸುಪುತ್ರಿ ಜನಿಸಿರುತ್ತಾಳೆ.

### ಗೃಹಪ್ರವೇಶ

ಸಂಘದ ಹಿರಿಯ ಪೋಷಕ ಶ್ರೀ ಹೆಚ್. ಕೃಷ್ಣಸ್ವಾಮಿ ಮತ್ತು ಸಂಘದ ಉಪಾಧ್ಯಕ್ಷ ಶ್ರೀ ಎಚ್.ಕೆ. ಶಶಿಧರ್ ಹಾಗೂ ಶ್ರೀಮತಿ ಪದ್ಮಶ್ರೀರವರು ತಮ್ಮ ನೂತನ ಗೃಹ 'ಸಂಹಿತ'ದ ಪ್ರವೇಶವನ್ನು ದಿನಾಂಕ 18–11–2015ರಂದು ಮೈಸೂರಿನಲ್ಲಿ ನೆರವೇರಿಸಿದರು.

### ಶುಭವಿವಾಹ

ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಟಿ.ಎಸ್. ರಮೇಶ್ ಹಾಗೂ ಶ್ರೀಮತಿ ನಾಗರತ್ನರವರ ಪುತ್ರಿ ಕು॥ ಟಿ.ಆರ್. ಶೃತಿ ಅವರ ವಿವಾಹವು ಚಿ. ಅಭಿನವ್ ಕುಲಕರ್ಣಿ ಅವರೊಂದಿಗೆ ದಿನಾಂಕ 8–11–2015ರಂದು ಬೆಂಗಳೂರಿನಲ್ಲಿ ನೆರವೇರಿತು.

* * *

ಸಂಘದ ಹಿರಿಯ ಸದಸ್ಯ ಎಸ್.ಎನ್. ಕೃಷ್ಣಮೂರ್ತಿ, ಶ್ರೀಮತಿ ಸ್ವರ್ಣ ಅವರ ಪುತ್ರಿ ಚಿ॥ ಸೌ॥ ಕೆ. ಶ್ರೀವಿದ್ಯಾ ಅವರ ವಿವಾಹ ಶ್ರೀಮತಿ ಮತ್ತು ಶ್ರೀ ವೆಂಕಟೇಶಯ್ಯನವರ ಪುತ್ರ ಚಿ॥ ಬಿ.ವಿ. ಅಶ್ವತ್ಥ್ ಅವರೊಂದಿಗೆ ದಿನಾಂಕ 16–08–2015ರಂದು ಶ್ರೀ ಶ್ರೀ ಪ್ರಸನ್ನ ವೆಂಕಟೇಶ್ವರ ದೇವಸ್ಥಾನ, ಚಿಕ್ಕತಿರುಪತಿಯಲ್ಲಿ ನೆರವೇರಿತು.

* * *

ಸಂಘದ ಸದಸ್ಯ ಶ್ರೀ ನಿರಂಜನ್‌ರವರು, ಆಗಮಿಕ–ಪೌರೋಹಿತ್ಯ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆಯನ್ನು ಗುರುತಿಸಿ, ಉಲ್ಲಾಳ ಕ್ಷೇತ್ರ ಕ್ಷೇಮಾಭಿವೃದ್ಧಿ ಸಂಘವು 2015ರ 'ಕೆಂಪೇಗೌಡ' ಪ್ರಶಸ್ತಿಯನ್ನು ನೀಡಿ ಸತ್ಕರಿಸಿರುತ್ತದೆ.

ಸಂಘವು ಮೇಲ್ಕಂಡ ಎಲ್ಲರಿಗೂ ಶುಭ ಹಾರೈಸುತ್ತದೆ.



ಸೇವೆಯಲ್ಲಿ ಸ್ವಯಂ ಸೇವಕರು

# ವಾರ್ತಾ ಚಿತ್ರಗಳು



ಸಂಘದ ಸದಸ್ಯೆ ಶ್ರೀಮತಿ ಸುಮಿತ್ರಾ ನಾಗರಾಜ್‌ರವರು ತಮ್ಮ ಪತಿ ದಿ. ನಾಗರಾಜ್‌ರವರ 80ನೇ ವರ್ಷದ ನೆನಪಿಗಾಗಿ ಸಂಘಕ್ಕೆ 10,000/– ರೂಗಳನ್ನು ನೀಡಿದರು



ಸಂಘದ ಸದಸ್ಯರಾದ ಶ್ರೀ ಮಂಜುನಾಥ್ ದಂಪತಿಗಳು ತಮ್ಮ ವಿವಾಹದ 25ನೇ ವರ್ಷದ ಅಂಗವಾಗಿ ಸಂಘಕ್ಕೆ 10,000/– ರೂಪಾಯಿಗಳನ್ನು ನೀಡಿದರು



ಡಾ. ಸ್ವಾಮಿನಾಥ್ ದಂಪತಿಗಳು ಶ್ರೀನಿವಾಸ ಕಲ್ಯಾಣೋತ್ಸವದ ಸಂದರ್ಭದಲ್ಲಿ ಶ್ರೀ ಶ್ರೀನಿವಾಸ ದೇವರಿಗೆ ಮಾಂಗಲ್ಯ ಸಮರ್ಪಣೆ ಮಾಡಿದರು

# ಓದುಗರ ಪತ್ರಗಳು




ಸಂಪಾದಕರಿಗೆ

ಸಂಚಿಕೆ 3ರ ಸೆಪ್ಟೆಂಬರ್ 2015ರ ತ್ರೈಮಾಸಿಕ ಬೃಹಚ್ಚರಣ ಪತ್ರಿಕೆಯಲ್ಲಿ ಗಣಿತದ ಪ್ರೊ. ಎಸ್.ಕೆ. ಲಕ್ಷ್ಮಣರಾವ್‌ರ ವ್ಯಕ್ತಿತ್ವವನ್ನು ಅಚ್ಚುಕಟ್ಟಾಗಿ ಪ್ರಕಟಿಸಲಾಗಿದೆ. ಇಂತಹ ಬರಹಗಳು ಬೃಹಚ್ಚರಣ ಯುವ ವೃಂದದಲ್ಲಿ ಸ್ಫೂರ್ತಿಯನ್ನು ತುಂಬಿಸುತ್ತದೆ. ಮುಂಬರುವ ಅಚ್ಚಿನಲ್ಲಿ ಇಂಥಹ ಮಹನೀಯರ ವ್ಯಕ್ತಿತ್ವವನ್ನು 'ಬೃಹಚ್ಚರಣ'ದಲ್ಲಿ ಪರಿಚಯ ಮುಖೇನ ಪ್ರಕಟಿಸಿದರೆ ನಮ್ಮ ಜನಾಂಗಕ್ಕೆ ಗೌರತ್ವವನ್ನು ಸಲ್ಲಿಸಿದಂತಾಗುತ್ತದೆ.

**ಸೇಲಂ ವಿ. ಸುಬ್ರಮಣ್ಯಂ**

✦ ✦

ನಮಸ್ಕಾರ

ಸಂಚಿಕೆ ಸಕಾಲಕ್ಕೆ ತಲುಪಿದೆ. ಎಂದಿನಂತೆ ಅಂದವಾಗಿದೆ.

ಕಗ್ಗ ಕುರಿತಾದ ಪದ್ಯ ಅದಕ್ಕೆ ವಿವರ, ವಿಶೇಷವಾಗಿ ಕ್ಲಿಷ್ಟವುಳ್ಳದ್ದಕ್ಕೆ ವಿವರ ಚೆನ್ನಾಗಿದೆ. ಪ್ರವಾಸ ಕುರಿತಾದ ಲೇಖನ–ಚಿತ್ರಗಳು ಚೆನ್ನಾಗಿವೆ. 'ದಶಾವತಾರ' ಕುರಿತಾದ ಲೇಖನ ಮತ್ತೆ ಮತ್ತೆ ಕಣ್ಣಾಡಿಸುವಂತೆ ಇದೆ. ಅನಿಲ್ ರಮೇಶ್ ಅವರಿಗೆ ವಂದನೆಗಳು. ಪ್ರೊ. ಎಸ್.ಕೆ. ಲಕ್ಷ್ಮಣ ರಾವ್ ಅವರ ಕುರಿತಾದ ಲೇಖನ ಮತ್ತು ಸೇಲಂ ವಿ. ಸುಬ್ರಮಣ್ಯಂ ಅವರ ಪುಟ್ಟ ಬರಹ ಸಹ ಚೆನ್ನಾಗಿದೆ. ಅರೇಹಳ್ಳಿ ಮುನೀಶ್ವರಯ್ಯ ನವರ ಸುಮಾರು 40 ವರ್ಷಗಳ ಸಣ್ಣ ಉಪಕಾರ ಮರೆಯುವಂತಿಲ್ಲ. ಲೇಖನ ಓದಿ ನೆನಪಿಗೆ ಬಂತು.

'ಬೃಹಚ್ಚರಣ' 16 ತ್ರೈಮಾಸಿಕ ಸಂಚಿಕೆಗಳ ಕುರಿತಾದ 'ಪರಿಚಯ' ಮತ್ತು 'ನೆನಪಿನಂಗಳ ಛಾಯಾಚಿತ್ರ 23' ಚೆನ್ನಾಗಿ ಮೂಡಿಬಂದಿದೆ. 1965ರಲ್ಲಿ ನಡೆದ ಮದುವೆ ಸಮಾರಂಭಕ್ಕೆ ನಾನು ಹೋಗಿದ್ದು ನನ್ನ ಸಹೋದರ, ಅತ್ತಿಗೆ ಮಗು ಇವರನ್ನು ನೆನಪಿಗೆ ತಂದಿದ್ದಕ್ಕೆ ವಂದನೆಗಳು. 'ಪೂರ್ಣಕುಂಭ' ಕುರಿತಾದ ಲೇಖನ ಓದಿ ತಿಳಿಯ ಬೇಕಾದದ್ದು. ಕೊತ್ತುಂಬರಿ ಸೊಪ್ಪಿನ ತೊಕ್ಕು ಮಾಡುವ ಬಗ್ಗೆ ತಿಳಿಸಿದ ಲೇಖನ ಚೆನ್ನಾಗಿದೆ. ಎಂ.ಪಿ. ರಂಗನಾಥ್ ಅವರ ವೇಗದ ಇಂದಿನ ಜೀವನ ಕುರಿತಾದ ಕವಿತೆ ಯೋಚಿಸುವಂತೆ ಮಾಡುತ್ತದೆ.

ಶ್ರೀ ಮದ್‌ಭಾಗವತ ಕುರಿತಾದ ಲೇಖನ ಮತ್ತೆ ಮನನ ಮಾಡುವಂತಾಯ್ತು. ಶ್ಲೋಕ ಇದ್ದಿದ್ದರೆ ಇನ್ನೂ ಚೆನ್ನಾಗಿರುತ್ತಿತು. ಹೀಗೆಯೇ ಭಾಗವತದ ಶ್ಲೋಕ ಸಹಿತ ವ್ಯಾಖ್ಯಾನ. ಡಿವಿಜಿಯವರ ಸಂಕೀರ್ಣಗಳಿಂದ ಆಯ್ದ ಪುಟ ಬರಹಗಳೂ ಆಗಾಗ್ಗೆ ಬರಲಿ ಎಂದು ಬಿನ್ನಹ. ಪ್ರವಾಸ ಕುರಿತ ಚಿತ್ರಗಳು–ವಿವರ ಚೆನ್ನಾಗಿ ಮೂಡಿದೆ. ಪದವೀಧರ ವಿದ್ಯಾರ್ಥಿನಿಯರ ಸಾಧನೆ ಅನುಪಮ.

**5.11.2015** **ಶಾವಕನಹಳ್ಳಿ ಎನ್. ಕೃಷ್ಣಮೂರ್ತಿ**
ಅರಶಿನಕುಂಟೆ

ಮಾನ್ಯ ಸಂಪಾದಕರೇ, ನಮಸ್ಕಾರ

ಶ್ರೀ ಅರುಣ್ ಫೋನ್ ಲೆ ಚೊನ್ನಾಪ್ಪೆ ಸಕಾಲತ್ತು ಪತ್ರಿಕೆ ಚೇರದೆ. ಪ್ರತೀ ಸಾರಿ ಅಷ್ಟೆ ಇಂದಸಾರಿ ಕೂಡ ಪ್ರಾರಂಭತೀ ಅನ್ನು ಕೊನೇವರ್‍ರೊ ನನ್ನೆ ವಂದದೆ, ಸಂಪಾದಕ ಸಮಿತೀರೆ ಎಂದೇ ನಮಸ್ಕಾರಂಗು ವಂದನೆಗಳು.

ಇತ್ತೀಚಿನ ಸಂಚಿಕೆಗಳಲ್ಲಿ 'ಪರೀಚರಣದ' ಮಾತಿನ ಸೊಗಡಿಲ್ಲ. ಅದು ಸ್ವಲ್ಪವಾದರೂ ಇರಲಿ ಅಂತ ತಮ್ಮಲ್ಲಿ ಮನವಿ. ಸರ್ವ ಸದಸ್ಯರ ಸಭೆಯ ಕುರಿತಾದ ಪಕ್ಷಿನೋಟ, ಚಿತ್ರಗಳು ಚೆನ್ನಾಗಿವೆ. 'ಸದಸ್ಯರಿಗಾಗಿ ಕಾರ್ಯಾಗಾರ' ಕುರಿತು ಸಭೆಗೆ ಬರದಿದ್ದವರಿಗಾಗಿ ಅಗತ್ಯ ಸುರಕ್ಷತಾ ಮಾಹಿತಿಗಳನ್ನು ಮಾನ್ಯ ಸುದರ್ಶನ್ ಅವರಿಂದ ಬರೆಯಿಸಿ ಪತ್ರಿಕೆಯಲ್ಲಿ ಪ್ರಕಟಿಸಲು ಕೋರಿದೆ.

ಪೂಜಾ ವಿಧಾನದ ಚಿತ್ರ, ಶ್ರೀಶಾರದಾಮಾತೆ, ಶ್ರೀ ಶ್ರೀ ಸದ್ಗುರುಗಳ ಚಿತ್ರ ಚೆನ್ನಾದ ವಿವರಣೆ ಸಂಗ್ರಹಕ್ಕೆ ಯೋಗ್ಯ ಎಂ.ಪಿ. ರಂಗನಾಥ ಬರವಣಿಗೆ ಎಂದಿನಂತೆ ಚೆನ್ನಾಗಿದೆ. ನಾನು ಹಿಂದೆ ಕೆಲವರ್ಷ ಅವರ ಪಕ್ಕದ ಮನೆಯಲ್ಲಿದ್ದೆ. ಸರ್ವ ಸದಸ್ಯರ ಸಭೆಯಲ್ಲಿ ಮತ್ತೆ ಭೇಟಿಯು ಸಂತಸದ ವಿಷಯ. ರಾಷ್ಟ್ರಕವಿ ಕುವೆಂಪು ಅವರ ಪತ್ರ ಪ್ರಕಟಿಸಿದ್ದಕ್ಕೆ ವಂದನೆಗಳು. ಕವಿ ಬೇಂದ್ರೆ, ಡಿ.ವಿ.ಜಿ.ಯವರ ಕುರಿತಾದ ಸತ್ಯಮೂರ್ತಿಯವರ ಬರಹ ಅರ್ಥಪೂರ್ಣ. ಹೆಚ್. ಕೃಷ್ಣಸ್ವಾಮಿ ಅವರು ಬರೆದಂತೆ ನಾವು, ಸಮುದಾಯ ಸಮಾಜಮುಖಿಯಾಗಿ ಸೇವೆ ಸಲ್ಲಿಸುತ್ತಿರುವುದು, ಇನ್ನೂ ಹೆಚ್ಚಾಗಲಿ ಎಂದು ಆಶಿಸುತ್ತೇನೆ. ಭ್ರಮರಾ ಗೋಪಿನಾಥ್ ಅವರ ಲೇಖನ 2–2 ಸಾರಿ ಓದುವಂತಾಯ್ತು. ಅವರು ಸದ್ಗುರುಗಳ ಭಜನೆಯಲ್ಲಿ ಇತ್ತೀಚೆಗೆ ನಮ್ಮಲ್ಲಿ ಪಾಲ್ಗೊಂಡಿದ್ದು ನೆನಪಿದೆ. ಡಾ|| ಸ್ವಾಮಿನಾಥ್ ಬಗ್ಗೆ, ಸುಬ್ಬರಾಯರ ಬಗ್ಗೆ, ಡಿ.ವಿ.ಜಿ. ಮಾತು, ಅಡಿಗೆ, ಸಂಗೀತ. ಹಿರಿಯ ಸದಸ್ಯನಾದ ನನಗೆ ಮತ್ತೆ ಮತ್ತೆ ಓದುವಂತೆ ಮಾಡಿತು. ಉನ್ನತ ಶಿಕ್ಷಣದೊಂದಿಗೆ ವೀಣಾ ಸಾಧನೆ, ದೇಶವಿದೇಶಗಳಲ್ಲಿ ನಮ್ಮ ಕಲೆಯ ಪ್ರದರ್ಶನ (ಶ್ರೀಮತಿ ರಂಜಿನಿಯವರಿಂದ) ತುಂಬಾ ಸಂತೋಷ ತರುವ ವಿಷಯ.



**10.10.2015** **ಎನ್. ಕೃಷ್ಣಮೂರ್ತಿ**

Book-Post

To,

_______________

_______________

_______________

*If un Delivered please return to :*
*President*
**'Brihacharana Sangha'** No. 8, 3rd Cross, Annaiyyappa Block, Kumarapark West, Bengaluru-560 020.

Published by Sri S. Somasundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at **Ila Mudrana,** No. 36, 40Ft. Road, Raghavanagar, NTY Layout, Bengaluru-560 026. E-mail: ilaprinters@gmail.com